# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XIX - 11    ನವೆಂಬರ್ 2001

ಈ ಸಂಚಿಕೆಯಲ್ಲಿ


ಅಸೋಸಿಯೇಶನ್‌ನಲ್ಲಿ • ರಮಾವಸಂತ್ 2

ಕೃತಿವಿಮರ್ಶೆ

''ಶ್ರೀ ರಾಮಾಯಣ ಮಹಾನ್ವೇಷಣಂ''ದಲ್ಲಿ ಸಮಕಾಲೀನ ಪ್ರಜ್ಞೆ • ಡಾ. ಜಿ.ಎನ್. ಉಪಾಧ್ಯ 6

Association's Platinum Jubilee Celebration 8

ವೀರಪ್ಪ ಮೊಯಿಲಿಯವರ

'ಶ್ರೀರಾಮಾಯಣ ಮಹಾನ್ವೇಷಣಂ' ಮಹಾಕಾವ್ಯದ ಭಾಷೆ ಮತ್ತು ಶೈಲಿ • ಸುನೀತಾ ಶೆಟ್ಟಿ 12

ಸುತ್ತ-ಮುತ್ತ 14



The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"

ಅಸೋಸಿಯೇಷನ್ನಿನಲ್ಲಿ

## ವಯೊಲಿನ್ ವಾದನ

ಅಕ್ಟೋಬರ್ 20ರಿಂದ ''ಇಂಡಿಯನ್ ಮ್ಯೂಸಿಕಲ್ ಸೊಸೈಟಿ'' ಹಾಗೂ ''ಮೈಸೂರು ಅಸೋಸಿಯೇಷನ್'' ಜಂಟಿಯಾಗಿ ಒಂದು ಪಿಟೀಲು ವಾದನದ ಕಛೇರಿಯನ್ನು ಏರ್ಪಡಿಸಲಾಗಿತ್ತು. ಅಂದಿನ ಕಲಾಕಾರರು ಶ್ರೀಮತಿ 'ವೀಣಾ ಸುರೇಶ್' ಸಂಜೆ 7 ಗಂಟೆಗೆ ಕಾರ್ಯಕ್ರಮವು ಆರಂಭವಾಯಿತು. ಶ್ರೀಮತಿ ರಮಾ ವಸಂತ್ ಎಲ್ಲರನ್ನು ಸ್ವಾಗತಿಸಿ ಕಲಾವಿದರನ್ನು ಪರಿಚಯಿಸಿದರು.

ಶ್ರೀಮತಿ ವೀಣಾ ಸುರೇಶ್‌ರವರು ಮೈಸೂರಿನವರು, ಇವರನ್ನು ಚಿಕ್ಕ ವಯಸ್ಸಿನಲ್ಲೇ ಅವರ ತಾಯಿಯವರು ಸಂಗೀತ ಪ್ರಪಂಚಕ್ಕೆ ಪರಿಚಯಿಸಿದರು. ಇವರು ಶ್ರೀಮತಿ ಜಯಮ್ಮ ಅವರಲ್ಲಿ ಸಂಗೀತ ಶಿಕ್ಷಣವನ್ನು ಆರಂಭಿಸಿ ನಂತರ ''ಆನೂರು ರಾಮಕೃಷ್ಣ' ಹಾಗೂ ಹೆಚ್ ಕೆ. ನರಸಿಂಹಮೂರ್ತಿಯವರಲ್ಲಿ ಮುಂದುವರೆಸಿದರು. ಈಗ ಹೆಸರಾಂತ ವಿದ್ವಾನ್ ''ಶ್ರೀ ಟಿ.ಎನ್. ಕೃಷ್ಣನ್'' ಅವರಲ್ಲಿ ಕಲಿಕೆಯನ್ನು ಮುಂದುವರೆಸಿದ್ದಾರೆ.

ಆಕಾಶವಾಣಿ ಹಾಗೂ ದೂರದರ್ಶನದಲ್ಲಿ 'ಬಿ'ಗ್ರೇಡ್ ಕಲಾವಿದರು, ಕಳೆದ ಇಪ್ಪತ್ತು ವರ್ಷಗಳಿಂದ ಇವರು ಕಾರ್ಯಕ್ರಮಗಳನ್ನು ಕೊಡುತ್ತಾ ಬಂದಿದ್ದಾರೆ. ಅನೇಕ ಸಭೆಗಳಲ್ಲಿ ಇವರು ಕಛೇರಿಗಳನ್ನು ನಡೆಸಿದ್ದಾರೆ. ''ಗಾನ ಭಾರತಿ'', ತ್ಯಾಗರಾಜ ಸಂಗೀತ ಸಭಾ, ''ಗಾಯನ ಸಮಾಜ'' ಮೊದಲಾದವು ಅಲ್ಲದೆ 'ಭೂಪಾಲ್' 'ಮದ್ರಾಸ್', 'ಕೊಯಮತ್ತೂರ' ಮೊದಲಾದ ಇನ್ನೂ ಅನೇಕ ಊರುಗಳಲ್ಲಿ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಮ್ಯೂಸಿಕ್ 'ಎಂ.ಎ.'ನಲ್ಲಿ ಮೊದಲ ರ್‍ಯಾಂಕ್ ಗಳಿಸಿದ್ದಾರೆ.

ನ್ಯಾಯಾಧೀಶ ಶ್ರೀ ಬಿ.ಎಸ್., ಶ್ರೀ ಕೃಷ್ಣ ಅವರು ಕಲಾವಿದರಿಗೆ ಪುಷ್ಪಗುಚ್ಛವನ್ನರ್ಪಿಸಿ ಸನ್ಮಾನಿಸಿದರು.

ಶ್ರೀಮತಿ ವೀಣಾ ಸುರೇಶ್ ಅವರು ''ಶ್ರೀ ಗಣಪತೆ... ಎಂಬ ಗಣಪತಿಯನ್ನು ಕುರಿತ ರಚನೆಯಿಂದ ಕಾರ್ಯಕ್ರಮವನ್ನು ಆರಂಭಿಸಿದರು. ಬಹಳ ಅಪರೂಪದ ಕೃತಿಗಳನ್ನು ನುಡಿಸಿದರು. ದೇವಿಯ ಕುರಿತು 'ಅಖಿಲಾಂಡೇಶ್ವರಿ ರಕ್ಷಮಾಂ...', ಪುರಂದರದಾಸರ ''ಜಗದೋದ್ಧಾರನ...'' ಹಾಗೂ ಇನ್ನು ಅನೇಕ ಕೃತಿಗಳನು ನುಡಿಸಿದರು. ಶ್ರೀ ಪ್ರಸಾದ್‌ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಪಿಟೀಲು ವಾದ್ಯವು ವಿದೇಶಿಯಾದರೂ ನಮ್ಮ ಭಾರತೀಯ ಸಂಗೀತಕ್ಕೆ ಹೆಚ್ಚು ಅನುಕೂಲವಾಗಿದೆ. ಮೋದವನ್ನೂ ಕೊಡುತ್ತದೆ. ಮುದವನ್ನೂ ನೀಡುತ್ತದೆ. ಇದೆ ಸಂಗೀತದ ಶಕ್ತಿ. ಪಕ್ಕವಾದ್ಯದಲ್ಲಿ ಶ್ರೀ ಶ್ರೀಧರ್ ಪಾರ್ಥಸಾರಥಿ ಮೃದಂಗ ಹಾಗೂ ಶ್ರೀ ಚಂದ್ರಶೇಖರ್ ಘಟನ್ನು ನುಡಿಸಿದರು.


## ಭಕ್ತಿ ಸಂಗಮ

ಈ ವರ್ಷ ಮೈಸೂರು ಅಸೋಸಿಯೇಷನ್‌ನ ಅಮೃತ ಮಹೋತ್ಸವವನ್ನು ಆಚರಿಸುತ್ತಿದೇವೆ. ಅಮೃತಮಹೊತ್ಸವದ ಅಂಗವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಅಂತೆಯೇ ಅಕ್ಟೋಬರ್ 27 ಶನಿವಾರ ಮತ್ತು 28 ಭಾನುವಾರದಂದು 'ಭಕ್ತಿ ಸಂಗಮ' ಎಂಬ ಹೆಸರಿನಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಇದರಂಗವಾಗಿ 'ಡಾ. ವಸಂತ್ ಕುಷ್ಟಗಿ' ಅವರು ಕರ್ನಾಟಕದ ಹರಿದಾಸರುಗಳ ಕೊಡುಗೆ ಎಂಬ ವಿಚಾರವಾಗಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಸತ್ಯಧ್ಯಾನ ವಿದ್ಯಾಪೀಠದ ಕುಲಪತಿ ವಿದ್ಯಾಸಿಂಹಾಚಾರ್ಯ ಮಾಹುಲಿ ಅವರು ಆಗಮಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರು ಅವರು ವಿಶೇಷ ಅತಿಥಿಗಳಾಗಿ ಆಗಮಿಸಿದ್ದರು.

6 ಘಂಟೆಗೆ ಕಾರ್ಯಕ್ರಮವು ಆರಂಭವಾಯಿತು. ಶ್ರೀಮತಿ ಪ್ರಮೋದಿನಿ ಅವರಿಂದ ಪ್ರಾರ್ಥನೆ ಗೀತೆಯಾಯಿತು. ನಂತರ ಶ್ರೀ ಮಂಜುನಾಥಯ್ಯ ಅವರು ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸಿ ಅವರ ಪರಿಚಯ ಮಾಡಿಕೊಟ್ಟರು.

ಶ್ರೀ ವಿದ್ಯಾಸಿಂಹಾಚಾರ್ಯ ಅವರು ದಿ. ಮಾಹುಲಿ ಗೋಪಾಲಾಚಾರ್ಯ ಅವರ ಪುತ್ರ. ತಂದೆಯನ್ನು ಮೀರಿಸಿದ ಪಾಂಡಿತ್ಯ, ಇವರ ತಂದೆಯವರು 1956 ರಲ್ಲಿ ಪ್ರಾರಂಭಿಸಿದ 'ಸತ್ಯಧ್ಯಾನ ವಿದ್ಯಾಪೀಠ' ಎಂಬ 'ಗುರುಕುಲ'ವನ್ನು ಇವರು ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಇಲ್ಲಿ 7ರಿಂದ 25ವರ್ಷದ ವರೆಗೆ ಸುಮಾರು 150 ವಿದ್ಯಾರ್ಥಿಗಳಿದ್ದಾರೆ. ಅವರ ಊಟ ವಸತಿ ಮತ್ತು ವಿದ್ಯಾಭ್ಯಾಸವನ್ನು ನೋಡಿಕೊಳ್ಳುವ ಒಂದು ಗುರುತರ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಈಗಿನ ದಿನಗಳಲ್ಲಿ ಇದು ಬಹಳ ಅಪರೂಪದ ಕಾರ್ಯ, ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಸಾಹಿತ್ಯ, ವಿಜ್ಞಾನ, ಕಂಪ್ಯೂಟರ್ ಕಲಿಕೆ ಮತ್ತು ಸಂಸ್ಕೃತ, ವೇದ ಉಪನಿಷತ್, ತತ್ವಜ್ಞಾನ ಎಲ್ಲವನ್ನು ಕಲಿಸುತ್ತಾರೆ. ಜ್ಞಾನಾರ್ಜನೆಗೆ ಪೂರಕವಾಗಿ ಇವರಲ್ಲಿ ವಿಶೇಷ ದೊಡ್ಡ ಗ್ರಂಥ ಭಂಡಾರವೇ ಇದೆ. ಕುಲಪತಿಗಳು ಇಂದಿಗೂ ಆರೆಂಟು ಗಂಟೆಗಳ ಕಾಲ ಅಧ್ಯಯನ ನಡೆಸುತ್ತಾರೆ. ಇವರು ನ್ಯಾಯ, ತರ್ಕ, ವ್ಯಾಕರಣ, ಮೀಮಾಂಸ, ವೇದಾಂತ ಮತ್ತು ಸಾಹಿತ್ಯವನ್ನು ಬಹಳ ಆಳವಾಗಿ ಅಭ್ಯಸಿಸಿದ್ದಾರೆ. ನಮ್ಮ ಸನಾತನ ಧರ್ಮದ ಬಗ್ಗೆ ಜನರಿಗೆ ತಿಳಿಸುವ ಸಲುವಾಗಿ ಅನೇಕ ಕಡೆ ಪ್ರವಚನಗಳನ್ನು ನಡೆಸುತ್ತಿದ್ದಾರೆ.

ಮಂಜುನಾಥಯ್ಯನವರು ನಂತರ ವಸಂತ ಕುಷ್ಟಗಿಯವರ ಪರಿಚಯವನ್ನು ಮಾಡಿಕೊಟ್ಟರು. ಇವರು ಗುಲ್ಬರ್ಗದ ಎನ್.ವಿ. ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದಾರೆ. ಅವರು 'ಭಕ್ತಿ ಮಾರ್ಗಕ್ಕೆ ಸಂತರ ಕೊಡುಗೆ' ಎಂಬ ವಿಷಯದಲ್ಲಿ 'ವಿಜಯದಾಸರು', 'ಪುರಂದರದಾಸರು' ಶ್ಯಾಮಸುಂದರ ದಾಸರು ಮೊದಲಾದವರ ಬಗ್ಗೆ ನಿಷ್ಣಾತಗುರುಗಳ ಮಾರ್ಗದರ್ಶನದಲ್ಲಿ ಆಳವಾದ ಸಂಶೋಧನೆಯನ್ನು ನಡೆಸಿದ್ದಾರೆ. 'ದಾಸಸಾಹಿತ್ಯ'ಕ್ಕೆ ಇವರ ಕೊಡುಗೆಯನ್ನು ಮೆಚ್ಚಿ ಉಡುಪಿ ಮಠದ ಶ್ರೀಗಳವರು ಮತ್ತು ತಿರುಮಲೆ ತಿರುಪತಿ ದೇವಾಲಯದವರು ಇವರನ್ನು ಸನ್ಮಾನಿಸಿದ್ದಾರೆ. ಇವರು 'ಉರ್ದು', 'ಪರ್ಶಿಯನ್', 'ಇಂಗ್ಲೀಷ್', 'ಹಿಂದಿ' ಹೀಗೆ ಬಹು ಭಾಷಾ ಪರಿಣತರು. 'ಕನಕದಾಸರ ಗೀತೆಗಳು' ಮತ್ತು 'ವಿಜಯದಾಸರ' ಎಂಬ ಎರಡು




ಭಕ್ತಿ ಸಂಗಮದ ಉದ್ಘಾಟನೆಯ ಸಂದರ್ಭದಲ್ಲಿ ಉದ್ಘಾಟನೆಯ ಸಂದರ್ಭದಲ್ಲಿ ಪ್ರಾ. ಕುಷ್ಟಗಿ, ಶ್ರೀ ಹರಿಕೃಷ್ಣ ಪುನರೂರು ಮತ್ತು ಕುಲಪತಿ ವಿದ್ಯಾಸಿಂಹಾಚಾರ್ಯರು.

ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ನಂತರ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ಅವರು ನಮ್ಮ ಪ್ರೀತಿಯ ಕುರುಹಾಗಿ ಎಲ್ಲರಿಗೂ ಪುಷ್ಪ ಗುಚ್ಛ ಹಾಗೂ ಕಿರುಕಾಣಿಕೆಯನ್ನು ನೀಡಿ ಸನ್ಮಾನಿಸಿದರು. ಮುಖ್ಯ ಅತಿಥಿಗಳಾದ ಶ್ರೀ ವಿದ್ಯಾಸಿಂಹಾಚಾರ್ಯರು ದೀಪವನ್ನು ಬೆಳಗಿಸಿ ಎರಡು ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಆಚಾರ್ಯರು ಸಭೆಯನ್ನುದ್ದೇಶಿಸಿ ನಾಲ್ಕು ಮಾತುಗಳನ್ನಾಡಿದರು. ನಂತರ ಆಚಾರ್ಯರು ಸಭೆಯನ್ನುದ್ದೇಶಿಸಿ ನಾಲ್ಕು ಮಾತುಗಳನ್ನಾಡಿದರು.




*ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಶ್ರೀ ಹರಿಕೃಷ್ಣ ಪುನರೂರವರಿಗೆ ಪುಷ್ಪಗುಚ್ಛವನ್ನು ನೀಡುತ್ತಿರುವುದು.*

ಭಕ್ತಿ ಮತ್ತು ಪ್ರೀತಿಯೇ ಧರ್ಮದ ತಳಹದಿ. ಮನುಷ್ಯನ ಜೀವನದಲ್ಲಿ ಪ್ರೀತಿ ಬಹಳ ಅಗತ್ಯ. ಭಕ್ತಿ ಮತ್ತು ಪ್ರೀತಿ ಇದ್ದೆಡೆ ದೇವರಿರುತ್ತಾನೆ. ಭಕ್ತಿಯಿಲ್ಲದೆ ದೇವರು ಒಲಿಯುವುದಿಲ್ಲ. ಆಚಾರ್ಯರ ಸ್ವಚ್ಛ ಸರಳ ಮಾತು ನಿರರ್ಗಳ ಇಂಗ್ಲೀಷ್ ವಾಗ್ಝರಿ ಎಲ್ಲರನ್ನು ಅಚ್ಚರಿ ಪಡಿಸಿತು.

ನಂತರ ಹರಿಕೃಷ್ಣ ಪುನರೂರು ಅವರು ಮಾತನಾಡಿ ಅಸೋಸಿಯೇಷನ್ನಿನ ಏಳಿಗೆ ಮತ್ತು ಅದು ಕನ್ನಡ ನಾಡಿಗೆ ಸಲ್ಲಿಸುತ್ತಿರುವ ಸೇವೆ ಎಲ್ಲವನ್ನು ಮೆಚ್ಚಿ ಶ್ಲಾಘಿಸಿದರು. ಅಮೃತ ಮಹೋತ್ಸವದಂತೆ ಶತಮಾನವನ್ನು ಆಚರಿಸಿ ಇನ್ನು ಹೆಚ್ಚಿನ ಏಳಿಗೆಗೆ ಬರಲಿ ಎಂದು ಹಾರೈಸಿದರು.

ನಂತರ ವಸಂತ ಕುಷ್ಟಗಿ ಅವರು 'ಭಕ್ತಿ ಪಂಥ'ಕ್ಕೆ ಹರಿದಾಸರ ಕೊಡುಗೆ ಬಗ್ಗೆ ಉಪನ್ಯಾಸ ಮಾಡಿದರು. ಸಾಮಾನ್ಯವಾಗಿ ಪುರಂದರದಾಸರು, ಕನಕದಾಸರು,.... ಹೀಗೆ 3-4 ದಾಸರಿಗಿಂತ ಹೆಚ್ಚಾಗಿ ಸಾಮಾನ್ಯರಿಗೆ ಗೊತ್ತಿಲ್ಲ. ಆದರೆ ಕುಷ್ಟಗಿಯವರು ವಿಜಯದಾಸರು, ಶ್ರೀಪಾದರಾಜರು, ವ್ಯಾಸರಾಯರು ಬಸವಣ್ಣನವರು ಶರಣ ಸಾಹಿತ್ಯ ಹೀಗೆ ಅನೇಕ ದಾಸರುಗಳ ಹಾಗೂ ಭಕ್ತಿ ಪಂಥಕ್ಕೆ ಅವರ ಕೊಡುಗೆಯ ಬಗ್ಗೆ ವಿವರವಾಗಿ ಮಾತನಾಡಿದರು. ದಾಸರ ಪದಗಳು ಭಕ್ತಿ ಚಳುವಳಿಗೆ ನಾಂದಿ ಹಾಡಿದವು. ಧರ್ಮದ ಶುದ್ಧೀಕರಣವೇ ಭಕ್ತಿಯ ಚಲುವಳಿ, ಸಂಗೀತ ಪ್ರಪಂಚಕ್ಕೆ ಕರ್ನಾಟಕ ಸಂಗೀತವು ಹರಿದಾಸರ ಕೊಡುಗೆ ಎಂದು ತಿಳಿಸಿದರು.

ಕೊನೆಯದಾಗಿ 'ಹರಿದಾಸ ನಾದಾಂಜಲಿ' ಎಂಬ ಮೈಸೂರು ಸುಬ್ರಹ್ಮಣ್ಯಂ ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಉದ್ದೇಶ ನಮ್ಮ ಕರ್ನಾಟಕ ಅನೇಕ ಸಂತರ, ಹರಿದಾಸರ ಹಾಗೂ ಅವರ ಕೃತಿಗಳ ಪರಿಚಯ ಹಾಗೂ ಪುನರಾವರ್ತನೆ.

ಶ್ರೀಮತಿ ಸುಕನ್ಯಾ ಪ್ರಭಾಕರ್ ಅವರು ಸಂಗೀತದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇಂಪಾದ ಸ್ವರ ಹಾಗೂ ಶುದ್ಧವಾಗಿ ಹಾಡಿ ನಿರೂಪಿಸುವ ಶೈಲಿ 'ಗಾನಕಲಾಶ್ರೀ' ಎಂಬ ಶ್ರೇಷ್ಠ ಬಿರುದು ಇವರಿಗೆ ದೊರೆತಿದೆ. ''ಹರಿದಾಸ ನಾದಾಂಜಲಿ'' ಯಡಿಯಲ್ಲಿ ಅನೇಕ ಹರಿದಾಸ ಕೃತಿಗಳನ್ನು ಹಾಡುತ್ತಾರೆ.

ಮೈಸೂರು ಸುಬ್ರಹ್ಮಣ್ಯಂ ಅವರು ವೀಣೆ ಶೇಷಣ್ಣನವರ ಮೊಮ್ಮಕ್ಕಳು, ''ಹರಿದಾಸ ನಾದಾಂಜಲಿ''ಯ ನಿರ್ದೇಶಕರು, ವೀಣಾಗಾನ ಮಂದಿರದ ಪ್ರಾಂಶುಪಾಲರು, ಸಂಗೀತ ಮತ್ತು ನೃತ್ಯದಲ್ಲಿ ಅಪಾರ ಪಾಂಡಿತ್ಯ, ಅನೇಕ ಬಿರುದುಗಳನ್ನು ಗಲಿಸಿದ್ದಾರೆ. ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರು.

ಶ್ರೀಮತಿ ಸುಕನ್ಯಾ ಪ್ರಭಾಕರ್ ಅವರು ದಾಸರ ಕೃತಿಗಳನ್ನು ಹಾಡಿದರು. ಶ್ರೀ ಸುಬ್ರಹ್ಮಣ್ಯಂ ಅವರು ವಿವರಣೆಯನ್ನು ನೀಡಿದರು. ವಾಡಿಕೆಯಂತೆ ಗಣಪತಿಯ ಪ್ರಾರ್ಥನೆಯೊಂದಿಗೆ ಆರಂಭಿಸಿದರು. ಪುರಂದರದಾಸರು, ವಿಜಯದಾಸರು, ಗೋಪಾಲ ದಾಸರು, ಶ್ರೀ ಪಾದರಾಜರು, ಕನಕದಾಸರು ಹೀಗೆ ಇನ್ನೂ ಅನೇಕ



*ಹರಿದಾಸ ನಾದಾಂಜಲಿ ಕಾರ್ಯಕ್ರಮವನ್ನು ಅರ್ಪಿಸಿದ ಶ್ರೀಮತಿ ಸುಕನ್ಯಾ ಪ್ರಭಾಕರ್ ಮತ್ತು ಮೈಸೂರು ಸುಬ್ರಮಣ್ಯ.*

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For
INDIAN AIRLINES &
JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750



*ಸಂಗೀತಾಚಾರ್ಯ ಅಶೋಕ ರಾನಡೆ ಮತ್ತು ಕಿಶೋರ್ ಜೋಶಿಯವರು ವೇದಿಕೆಯಲ್ಲಿ*

ದಾಸರುಗಳ ಕೃತಿಯನ್ನು ನಿರೂಪಿಸಿದರು. ಕೆಲವು ಕೃತಿಗಳು ಮನಮುಟ್ಟುವಂತೆ ಹಾಡಿದರು. ಸಾಮಾನ್ಯವಾಗಿ ಮನುಷ್ಯನ ಸ್ವಭಾವ ಎಷ್ಟೇ ಕೊಟ್ಟರೂ ಮತ್ತೆ ದೇವರನ್ನು ಬೇಡುವುದು, ಆದರೆ ದಾಸರು ಏನು ಹೇಳುತ್ತಾರೆ. ''ನೀ ಕೊಟ್ಟ ಭಾಗ್ಯವೇ ಯಥೇಚ್ಛವಾಗಿರುವಾಗ ನಾ ಬನ ಬೇಡಲಿ'' ಮೂಡಲಾದ್ರೀಶ ಗೋಪಾಲ ವಿಠಲ ಪರರ ಬೇಡದಂತೆ ಮಾಡು'' ಎಂದು ಬೇಡುತ್ತಾರೆ, ಎಂದು ಏನ ಬೇಡಲಿ ನಿನ್ನ ಬಳಿಗೆ ಬಂದು... ಎಂಬ ಕೃತಿಯಲ್ಲಿ ಹೇಳಿದರು.

''ಒನಕೆ ಓಬವ್ವ''ನ ಹೆಸರು ಚಿರಪರಿಚಿತ. ಆದರೆ ಹರಪನ ಹಳ್ಳಿ ಭೀಮವ್ವನ ಹೆಸರು ಎಷ್ಟು ಜನ ಬಲ್ಲರು? ಭೀಮವ್ವ ವಿರಚಿತ ''ನಿಲ್ಲೆ ನಿಲ್ಲೆ ಕೊಲ್ಲಾಪುರದೇವಿ... ಎಂದು ಲಕ್ಷ್ಮಿಯನ್ನು ಕುರಿತು ಹಾಡಿದರು.

ಶ್ರೀ ಪಾದರಾಜರ ''ಇಕ್ಕೊ ನೋಡೆರಂಗನಾಥನ ಚಿಕ್ಕ ಪಾದವ...'' ಆ ಒಂದು ಚಿಕ್ಕ ಪಾದದಿಂದ



*ಸಂತವಾಣಿಯನ್ನು ಹಾಡಿದ ಪಂ. ರಘುನಂದನ ಪಣ್ಶೀಕರ್*

ಭಗವಂತನು ಎಷ್ಟು ಸಾಹಸ ಕೃತ್ಯಗಳನ್ನು ಮಾಡಿದ್ದಾನೆ. ದೇವರ ಅನೇಕ ಲೀಲೆಗಳನ್ನು ಕೊಂಡಾಡಿದ್ದಾರೆ. ''ಶಂಖ ಚಕ್ರ ಗದಾಪದುಮಗಳ ಅಂಕಿ ಪಾದ'' ''ಲಲನೆ ಲಕ್ಷ್ಮೀ ಅಂಕಿದಲ್ಲಿ ನಲಿಯುವ ಪಾದ, ''ಕಂಸಾಸುರನ ಕೊಂದಪಾದ'', ''ಭಾಗೀರಥಿಯ ಭುವಿಗೆ ತಂದ ಪಾದ'', ಶಕಟಾಸುರನ ಬಜ್ಜಪಾದ... ಹೀಗೆ ಹಲವಾರು.,,

ಪುರಂದರದಾಸರ ರಾಗೀ ತಂದೀರ್ಯಾ, ರಾಗಿ ಎಂಬುದು ಅಗ್ಗವಾದ ವಸ್ತುವಲ್ಲ, ಅದು ಅತ್ಯುತ್ತಮವಾದದ್ದು. ಭಿಕ್ಷಕರಾಗಿ ತಂದು, ಅನ್ನದಾನ ಮಾಡುವರಾಗಿ, ಅನ್ನ ಛತ್ರ ಇಟ್ಟವರಾಗಿ, ದುಷ್ಟತನಗಳ ಬಿಟ್ಟವರಾಗಿ''... ಎಂದು ಬೋಧವಾಗಿ ದಾಸರು ಹೇಳಿದ್ದಾರೆ, ''ನೀನು ನಾನು, ನಾನು ನೀನು''... ಎಂಬ ಕೃತಿ, ಜಗನ್ನಾಥ ದಾಸರ ಕೃತಿ, ಹೆಳವನ ಕಟ್ಟೆ ಗಿರಿಯಮ್ಮ ಇನ್ನೂ ಅನೇಕ ಸಂತರ ಕೃತಿಗಳನ್ನು ಹಾಡಿದರು. ಕೊನೆಯಲ್ಲಿ ''ಲಾಲಿ...'' ಹೇಳಿದರು. ಲಾಲಿಯ ಇಂಪಿಗೆ ಶ್ರೋತೃಗಳಿಗೆ ತಲೆ ತೂಗುವಂತಾಯಿತು. ಇವರೊಡನೆ ಪಕ್ಕವಾದ್ಯದಲ್ಲಿ ಶ್ರೀ S.V. ರಾಮಚಂದ್ರನ್ ಪಿಟೀಲು ಮತ್ತು ಶ್ರೀ ಎಂ.ವಿ. ಕಾಶೀನಾಥ್ ಮೃದಂಗ ನುಡಿಸಿದರು.

ಎರಡನೆಯ ದಿವಸ ಸಂಗೀತಚಾರ್ಯ ಅಶೋಕ ರಾನಡೆಯವರು ಭಕ್ತಿ, ಸಂಗೀತದ ಬಗ್ಗೆ ಮಾತನಾಡಿದರು ಮತ್ತು ಪಂಡಿತ ರಘುನಂದನ ಪಣ್ಶೀಕರ್ ಅವರು ಸಂತವಾಣಿಯನ್ನು ಹಾಡಿದರು. ಎರಡೂ ದಿನದ ಕಾರ್ಯಕ್ರಮವನ್ನು ಶ್ರೀಮತಿ ಅಹಲ್ಯಾ ಬಲ್ಲಾಳ ಅವರು ಚಂದಾಗಿ ನಿರೂಪಿಸಿದರು.

## ಯಕ್ಷಗಾನದಲ್ಲಿ ಬೊಂಬೆಯಾಟ

''ಬೊಂಬೆಯಾಟವನ್ನಾಡಿಸಿದ ಮಹಾ ಭಾರತದ'' ಎಂದು ಒಂದು ಕೃತಿಯನ್ನು ಕನಕದಾಸರು ರಚಿಸಿದ್ದಾರೆ. ಇದರಲ್ಲಿ ಸಂಪೂರ್ಣ ಮಹಾಭಾರತದ ಕತೆಯು ಬರುತ್ತದೆ. ಹಾಗೆ ''ಬೊಂಬೆಯಾಟ ವನ್ನಾಡಿಸಿದ ರಾಮಾಯಣದ''... ಎಂದು ಹೇಳಬಹುದು. ನವೆಂಬರ್ 4ರಂದು ಅಸೋಸಿಯೇಷನ್ನಿನಲ್ಲಿ ಶ್ರೀ ಭಾಸ್ಕರ್ ಕಾಮತ್‌ರವರು ರಾಮಾಯಣದಲ್ಲಿ ಬರುವ 'ಲಂಕಾದಹನ'ವನ್ನು ಬೊಂಬೆಯಾಟದಲ್ಲಿ ಪ್ರದರ್ಶಿಸಿದರು. 'ರಾಮಾಯಣ' ಸಾಮಾನ್ಯ ಎಲ್ಲರಿಗೂ ಗೊತ್ತಿರುವ ಕಥಾವಸ್ತು. ಅನೇಕರು ವಿವಿಧ ಶೈಲಿಯ ನರ್ತನಗಳಲ್ಲಿ ಅಂದರೆ ಭರತನಾಟ್ಯ ಯಕ್ಷಗಾನ ಕೂಚಿಪುಡಿ... ಮುಂತಾದವುಗಳಲ್ಲಿ ರಾಮಾಯಣ ಕಥಾ ವಸ್ತುವನ್ನು ಪ್ರದರ್ಶಿಸಿದ್ದಾರೆ. ನರ್ತಕ, ನರ್ತಕಿಯರು ಕಥಾವಸ್ತುವನ್ನು ಓದಿ, ಅರ್ಥ ಮಾಡಿಕೊಂಡು, ಅಭ್ಯಾಸಮಾಡಿ, ಭಾವಿಸಿಕೊಂಡು, ನವರಸಗಳನ್ನು ಅಭಿನಯಿಸಿ ಅಭಿವ್ಯಕ್ತಪಡಿಸುತ್ತಾರೆ. ಆದರೆ ನಿರ್ಜೀವ ಬೊಂಬೆಗಳಲ್ಲಿ ಆ ಭಾವಗಳನ್ನು ತುಂಬಿ, ಜೀವವನ್ನು ತುಂಬಿ ಅದರಲ್ಲೆ ತನ್ಮಯರಾಗಿ ಆ ಬೊಂಬೆಗಳಿಂದ ಭಾವನಾ ಪೂರ್ಣವಾಗಿ ಅಭಿನಯಿಸುವುದು ನಿಜಕ್ಕೂ ಕಷ್ಟವಾದ ಕೆಲಸ. ಸಾಹಸವೆಂದೇ ಹೇಳಬಹುದು. ಇಂಥಾ ಒಂದು ಸಾಹಸವನ್ನು ಭಾಸ್ಕರ್ ಕಾಮತ್‌ರವರು ಸಾಧಿಸಿದ್ದಾರೆ. ''ಆಡಿಸುವಾತನ ಕೈಚಳಕದಲ್ಲಿ ಎಲ್ಲ ಅಡಗಿದೆ... ಎಂದು ಹೇಳುತ್ತಾರೆ. ಆಡಿಸುವಾತನ (ಭಾಸ್ಕರ್) ಕೈ ಚಳಕದ ಚಾಣಾಕ್ಷತೆ, ತೀಕ್ಷ್ಣತೆ, ಮಂದ ಹಾಗೂ ತೀವ್ರ ವೇಗದ ಗತಿಗನುಸಾರವಾಗಿ ಆಡಿಸುವುದು ನಿಜಕ್ಕೂ ಶ್ಲಾಘನೀಯ, ಬಹಳ ಅಪರೂಪದ ಜಾನಪದ ಕಲೆ. ಈ ತರಹದ ಕಲಾವಿದರೂ ಬಹಳ ಅಪರೂಪ. ಶ್ರೀ ಪ್ರಸಾದ್‌ರವರ ಸ್ವಾಗತ ಭಾಷಣ ನತಂರ ಭಾಸ್ಕರ್ ಕಾಮತ್‌ರವರು ಗಣಪತಿಯನ್ನು ಪೂಜಿಸಿ ಕಾರ್ಯಕ್ರಮವನ್ನು ಆರಂಭಿಸಿದರು. ಕಿಷ್ಕಿಂದರಾಜನಾದ ಸುಗ್ರೀವನು ತನ್ನೆಲ್ಲ ವಾನರದೂತರಿಗೆ, ನೀವೆಲ್ಲರೂ ಎಲ್ಲ ದಿಕ್ಕುಗಳಿಗೆಲ್ಲಾ ಹೋಗಿ ತಿಂಗಳೊಳಗೆ ಸೀತೆಯನ್ನು ಕಂಡು ಬರಬೇಕು ಎಂದು ಆಜ್ಞೆ ಮಾಡುವ ದೃಶ್ಯದಿಂದ ಆರಂಭ ಮಾಡಿದರು. ನಂತರ ಕೆಲವು ಕಪಿಗಳು ಉತ್ತರಾಭಿ ಮುಖಿಕ್ಕೆ ಹೊರಟು ಕೈಲಾಸ ಪರ್ವತದಲ್ಲಿ ಈಶ್ವರನನ್ನು ಕುರಿತು ಭಕ್ತಿಯಿಂದ ಪ್ರಾರ್ಥಿಸುತ್ತವೆ. ಅವುಗಳ ಭಕ್ತಿಗೆ ಮೆಚ್ಚಿ ತ್ರಿಶೂಳ, ಡಮರುಗದಿಂದ ಲಂಕೃತನಾದ ಈಶ್ವರನು ನಿಮ್ಮ ಕಾರ್ಯವು ಜಯಪ್ರದವಾಗಲಿ ಎಂದು ಆಶೀರ್ವದಿಸುತ್ತಾನೆ. ಮತ್ತೊಂದು ಕಪಿಗಳ ಗುಂಪು ಜಾಂಬವ, ಭಲೂಕರ ಮುಖಂಡತ್ವದಲ್ಲಿ ಮಲಯಾಚಲದ ಕಡೆಗೆ ಹೊರಡುತ್ತಾರೆ. ಎಲ್ಲೂ ಸೀತೆಯ ಸುಳಿವೇ ಇಲ್ಲ. ಹೀಗೆಯೇ ಕಪಿಗಳು ತಮ್ಮಲ್ಲೆ ವಿಚಾರ ಮಾಡುತ್ತಿರುವಾಗ ಸಂಪಾನೆ ಎಂಬ ಹದ್ದು ಇವರ ಮಾತುಗಳನ್ನು ಎಂಬ ಹದ್ದು ಇವರ ಮಾತುಗಳನ್ನು ಕೇಳಿ ಸಹಾಯ ಮಾಡಲು ಮುಂದೆ ಬರುತ್ತದೆ. ಸಂಪಾತಿಗೆ ಸೂರ್ಯನ ಹತ್ತಿರದ ತನಕ

ಹಾರುವ ಶಕ್ತಿ ಇರುತ್ತದೆ. ಈ ಶಕ್ತಿಯಿಂದ ಕಪಿಗಳನ್ನು ತನ್ನ ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ದಕ್ಷಿಣ ತೀರದ ಸಮುದ್ರಕ್ಕೆ ಕರೆತಂದು ರಾವಣನ ರಾಜ್ಯವಾದ ಲಂಕೆಯನ್ನು ತೋರಿಸಿ ಅಲ್ಲಿ ಸೀತೆಯನ್ನು ಹುಡುಕಿ ಎಂದು ಹೇಳುತ್ತದೆ. ಕಪಿಗಳೆಲ್ಲ ಸೇರಿ ಹನುಮಂತನನ್ನು ಹೋಗಿ ಬಾ ಎಂದು ಜಾಂಬವನು ಅರಿಕೆ ಮಾಡಿಕೊಳ್ಳುತ್ತಾನೆ.

ಹೀಗೆ ಹೊರಟ ಹನುಮಂತನು ದಾರಿಯಲ್ಲಿ ಅಡ್ಡಿ ಮಾಡಿದ ಛಾಯ ಎಂಬ ರಕ್ಕಸಿಯನ್ನು ಕೊಂದು, ತೃಣ ಬಿಂದು ಎಂಬ ಋಷಿಗಳ ಶ್ರಮಕ್ಕೆ ಬಂದು ಅವರನ್ನು ಲಂಕೆಗೆ ಹೋಗುವ ದಾರಿಯನ್ನು ಕೇಳಿ ಲಂಕೆಗೆ ಬರುತ್ತಾನೆ. ಅಲ್ಲಿ ಅಶೋಕ ವನದಲ್ಲಿ ಶಿಂಶುಪಾವೃಕ್ಷದ ಕೆಲಗೆ ಕುಳಿತಿರುವ ಸೀತೆಯನ್ನು ಕಾಣುತ್ತಾನೆ. ನಂತರ ರಾವಣನು ಬಂದು ಸೀತೆಯನ್ನು ತನ್ನ ರಾಣಿಯನ್ನಾಗಿ ಮಾಡಿಕೊಳ್ಳುತ್ತೇನೆ ಎನ್ನುತ್ತಾನೆ. ಸೀತೆಯು ಒಪ್ಪದಿರಲು ಅವಳನ್ನು ಕೊಳ್ಳುವುದಾಗಿ ಕತ್ತಿಯನ್ನು ತೆಗೆಯುತ್ತಾನೆ. ಆಗ ಮಂಡೋದರಿಯ (ರಾವಣ ಹೆಂಡತಿ) ಬಂದು ಸ್ತ್ರೀ ಹತ್ಯಾ ಪಾಪದ ಬಗ್ಗೆ ಎಚ್ಚರಿಸಿ ತಡೆಯುತ್ತಾಳೆ. ಎಲ್ಲವನ್ನೂ ಮರದ ಮೇಲೆ ಕುಳಿತು ಹನುಮಂತನು ನೋಡುತ್ತಿರುತ್ತಾನೆ. ನಂತರ ಕೆಳಗೆ ಬಂದು ಸೀತೆಗೆ ತನ್ನ ಪರಿಚಯವನ್ನು ಹೇಳಿ, ಸೀತೆಯು ನಂಬದಿರಲು ರಾಮನು ಕಳಿಸಿದ ಮುದ್ರೆಯುಂಗುರವನ್ನು ಕೊಡುತ್ತಾನೆ. ನಂತರ ಸೀತೆಗೆ ನಂಬಿಕೆ ಬಂದು ತನ್ನ ಚೂಡಾಮಣಿಯನ್ನು ರಾಮನಿಗೆ ಕೊಡೆಂದು ಕೊಡುತ್ತಾಳೆ, ನಂತರ ಹಸಿವೆ ತಾಳದೆ ರಾವಣನ ವನದಲ್ಲಿ ಹಣ್ಣುಗಳನ್ನು ತಿಂದು ವನವನ್ನೆಲ್ಲಾ ನಾಶಮಾಡುತ್ತಾನೆ. ಇದನ್ನು ತಿಳಿದ ರಾವಣನು ಆ ಕಪಿಯನ್ನು ಕೂಡಲೇ ಹಿಡಿದು ತನ್ನಿ ಎಂದು ಅಜ್ಞಾಪಿಸುತ್ತಾನೆ. ರಾವಣನ ಮಗ ಇಂದ್ರಜಿತು 'ಬ್ರಹ್ಮಾಸ್ತ್ರ'ವನ್ನು ಪ್ರಯೋಗಿಸಿ ಹನುಮಂತನನ್ನು ರಾವಣನ ಆಸ್ಥಾನಕ್ಕೆ ಕರೆತರುತ್ತಾನೆ. ಈ ಕಪಿಗೆ ಶಿಕ್ಷೆಯಾಗಬೇಕು. ಅದರ ಬಾಲಕ್ಕೆ ಬೆಂಕಿ



*ಲಂಕಾದಹನದಲ್ಲಿ ಒಂದು ದೃಶ್ಯ*

ಹಚ್ಚಿ ಎಂದು ರಾವಣನು ಆಜ್ಞೆಮಾಡುತ್ತಾನೆ. ಸೇವಕರು ಅದರ ಬಾಲಕ್ಕೆ ಬೆಂಕಿ ಹಚ್ಚುತ್ತಾರೆ. ಕಪಿಯು ಅದೇ ಬೆಂಕಿಯಿಂದ ರಾಮನ ಭಕ್ತ ರಾವಣನ ತಮ್ಮ ವಿಭೀಷಣನೊಬ್ಬನನ್ನು ಬಿಟ್ಟು ಲಂಕೆಯೆಲ್ಲವನ್ನೂ ದಹನ ಮಾಡುತ್ತಾನೆ. ಇದೇ 'ಲಂಕಾ - ದಹನ' ನಂತರ ಸಮುದ್ರದಲ್ಲಿ ಬಾಲವನ್ನದ್ದಿ ಬೆಂಕಿಯನ್ನು ನಂದಿಸಿ ರಾಮನಲ್ಲಿಗೆ ಹೋಗುತ್ತಾನೆ.

''ಲಂಕೆಯಲ್ಲದ ಕಪಿ ಲಂಕೆ ಎಲ್ಲಾ ಸುಟ್ಟ'' ಅಂತಾರೆ, ಆದರೆ ಇಲ್ಲಿ ವೇದಿಕೆಯ ರಕ್ಷಣೆಯನ್ನು ಗಮನಿಸಿ ಲಂಕೆಯು ಮಿತಿಯೊಳಗೆ ಸುಟ್ಟಿತು. ಗೊಂಬೆಗಳ ವೇಷ ಭೂಷಣಗಳು ಬಹಳ ಸುಂದರವಾಗಿದ್ದಿತು. ಆಟದಲ್ಲಿ ಕಪಿಗಳು ಜಟಾಯುವಿನ ಮೇಲೇರಿದ್ದು ಹಾಗೂ ಹನುಮಂತನು ಅಶೋಕ ವನದಲ್ಲಿ ಮರವನ್ನೇರಿ ಕುಳಿತು ಮಾಡುತ್ತಿದ್ದ ಕಪಿಚೇಷ್ಟೆಗಳ ತಾಂತ್ರಿಕ ನಿಪುಣತೆ ಬಹಳ ಮೆಚ್ಚುಗೆ ಪಡೆದವು. ಹಾಗೆಯೇ ಹನುಮಂತನನ್ನು ಗಗನ ಮಾರ್ಗದಲ್ಲಿ ಕಳಿಸುವ ತಾಂತ್ರಿಕ ನಿಪುಮತೆ ನಂತರ ಶ್ರೀ ಮಂಜುನಾಥಯ್ಯನವರು ಭಾಸ್ಕರ್ ಕಾಮತ್‌ರ ಬಗ್ಗೆ ಮಾತನಾಡಿದರು. ಜಾನಪದ ಕಲೆ ಅಳಿಸಿ ಹೋಗುತ್ತಿರುವ ಕಾಲದಲ್ಲಿ ಇವರು ಈ ಕಲೆಯನ್ನು ಉಳಿಸಿ ರೂಢಿಸಿಕೊಂಡು ಬಂದಿದ್ದಾರೆ. ಕಳೆದ 300 ವರ್ಷಗಳಿಂದ ಈ ಮನೆತನದವರು ಈ ಕಲೆಯನ್ನು ನಡೆಸಿಕೊಂಡು ಬಂದಿದ್ದಾರೆ. ಇವರ ತಂದೆ 'ಗೊಗ್ಗ ಕಾಮತ್'ರವರು ಅಸೋಸಿಯೇಷನ್ನಿನ ರಜತ ಮಹೋತ್ಸವದ ಸಂದಭ೯ದಲ್ಲಿ ಆಟವನ್ನು ನಡೆಸಿಕೊಟ್ಟಿದ್ದರು. ಶ್ರೀ ಭಾಸ್ಕರ್ ಕಾಮತ್ ಅವರು ಬ್ಯಾಂಕಿನಲ್ಲಿ ಉದ್ಯೋಗಸ್ಥರಾಗಿದ್ದರು. ಕಲೆಯ ಸೇವೆಗಾಗಿ ಅದನ್ನು ಒಟ್ಟು ಕಲೆಯನ್ನೇ ಮುಂದುವರೆಸಿದ್ದಾರೆ. ಭಾರತದೆಲ್ಲೆಡೆಗಳಲ್ಲೂ ಮತ್ತು ಅನೇಕ ವಿದೇಶಗಳಲ್ಲೂ ಕಾರ್ಯಕ್ರಮವನ್ನು ನಡೆಸಿದ್ದಾರೆ. ಭಾರತದಲ್ಲೆ ತಮ್ಮ ಕಲೆಯನ್ನು ಬೆಳೆಸಬೇಕೆಂದು ಅನೇಕ ವಿದೇಶಿ ಆಹ್ವಾನಗಳನ್ನು ನಿರಾಕರಿಸಿದ್ದಾರೆ ಎಂದು ಹೇಳಿದರು. ಅಸೋಸಿಯೇಷನ್ನಿನ ಶತಮಾನೋತ್ಸವದ ಸಂದರ್ಭದಲ್ಲೂ ಇವರ ಒಂದು ಕಾರ್ಯಕ್ರಮವು ನಡೆಯಲಿ ಎಂದು ಆಶಿಸೋಣ, ಅಧ್ಯಕ್ಷ ಶ್ರೀ ದೊರೆಸ್ವಾಮಿಗಳವರು ಕಲಾವಿದರಿಗೆ ಪುಷ್ಪಗುಚ್ಛಗಳನ್ನರ್ಪಿಸಿದರು.

ನಂತರ ಭಾಸ್ಕರ ಕಾಮತ್‌ರವರು ತಾವು ಯಾವ ರೀತಿ ಪ್ರಾಯೋಜಿಸುತ್ತಾರೆ ಎಂಬುದನ್ನು ತೋರಿಸಿದರು. ಇದು ಜಾನಪದ ಕಲೆ, ಇದರಲ್ಲಿ ತಾಳವೇ ಪ್ರಾಧಾನ್ಯ, ತಾಳದ ವಿನಾಸಕ್ಕೆ ತಕ್ಕಂತೆ ಆರಂಟು ಸೂತ್ರಗಳನ್ನು ಹಿಡಿದು ಬೊಂಬೆಯನ್ನು ಆಡಿಸುವುದು ಹೇಗೆಂದು ತೋರಿಸಿದರು. ಮದ್ದಲೆಗಾರರು, ಚಂಡೆಗಾರರು, ಭಾಗವತರು ಎಲ್ಲರನ್ನು ಪರಿಚಯಿಸಿದರು. ಮಂಗಳದೊಂದಿಗೆ ಕಾರ್ಯಕ್ರಮವು ಮುಗಿಯಿತು. ಸಭಾಂಗಣವು ತುಂಬಿತ್ತು.

-- ರಮಾವಸಂತ್



*ಶ್ರೀ ಭಾಸ್ಕರ್ ಕಾಮತ್ ಮತ್ತು ತಂಡದವರು ಗೊಂಬೆಯಾಡಿಸುವುದನ್ನು ತೋರಿಸುತ್ತಿರುವುದು.*

# "ಶ್ರೀ ರಾಮಾಯಣ ಮಹಾನ್ವೇಷಣಂ"ದಲ್ಲಿ ಸಮಕಾಲೀನ ಪ್ರಜ್ಞೆ

'ಸಮಕಾಲೀನ ಪ್ರಜ್ಞೆ' ಎಂದರೇನು? ಇದು ಕವಿಗೆ ಸಂಬಂಧಿಸಿದ್ದೇ? ಅಥವಾ ಕೃತಿಗೆ ಸಂಬಂದಿಸಿದ್ದೇ? ಇಲ್ಲವೇ, ಓದುಗನನ್ನು ಉದ್ದೇಶಿಸಿ ಹೇಳಿದ ಮಾತೆ? ಯಾ ಕಥಾ ವಸ್ತುವಿನ ಕುರಿತಾದ ವಿಚಾರವೆ? ಹೀಗೆ ಅನೇಕ ಪ್ರಶ್ನೆಗಳಿಗೆ ಮೊದಲು ನಾವು ಉತ್ತರವನ್ನು ಕಂಡುಕೊಳ್ಳಬೇಕು.

'ಸಮಕಾಲೀನ ಪ್ರಜ್ಞೆ' ಎಂಬ ಪರಿಕಲ್ಪನೆ ವ್ಯಾಪಕವಾದುದು; ವೈವಿಧ್ಯಮಯವಾದುದು. ಅದು ಕೇವಲ ಲೇಖಕನ ಸಾಮಾಜಿಕ ಪ್ರಜ್ಞೆಗಷ್ಟೇ ಸೀಮಿತವಾದುದಲ್ಲ. ಅದೊಂದು 'ಅಖಂಡ ಪ್ರಜ್ಞೆ' ಸಮಷ್ಠಿಯನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಂಡದ್ದು. ನಮ್ಮ ವರ್ತಮಾನ ಜಗತ್ತಿನ ಸರ್ವವ್ಯಾಪಾರವೂ; ವಿದ್ಯಮಾನವೂ ಸಮಕಾಲೀನ ಪ್ರಜ್ಞೆಯಲ್ಲೇ ಅಂತರ್ಗತವಾಗಿದೆ. ಯುಗಮಾನವೊಂದರ ಸಾಮಾಜಿಕ, ವೈಜ್ಞಾನಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಪಲ್ಲಟಗಳನ್ನು ಅಂದಿನ ತವಕತಲ್ಲಣಗಳನ್ನು ಕವಿ ತೀವ್ರವಾಗಿ ಅನುಭವಿಸಿ ಸಮರ್ಥವಾಗಿ ಅಭಿವ್ಯಕ್ತಿಸಿದ ಕ್ರಮ ಅವನ ಸಮಕಾಲೀನ ಪ್ರಜ್ಞೆಯಾಗುತ್ತದೆ. 'ಇದನ್ನೇ ಕವಿ ಡಾ. ಜಿ. ಎಸ್. ಶಿವರುದ್ರಪ್ಪ ಅವರು ''ನಿಜವಾದ ಅರ್ಥದಲ್ಲಿ ಒಬ್ಬ ಲೇಖಕ ಸಮಕಾಲೀನನೂ ಹೌದು; ಸಾರ್ವಕಾಲೀನನೂ ಹೌದು'' ಎಂದಿದ್ದಾರೆ. ಸಮಕಾಲೀನ ಪ್ರಜ್ಞೆ ಎಂದರೆ, ತತ್‌ಕ್ಷಣದ, ತತ್ಕಾಲದ ಶುಷ್ಕ ವರದಿಯಲ್ಲ. ಅದು ಇಡಿಯಾದ ಒಂದು ಜೀವನ ದೃಷ್ಟಿ. ಕವಿಯೊಬ್ಬನ ಸಮಕಾಲೀನ ಪ್ರಜ್ಞೆ ಒಟ್ಟು ಸಂಸ್ಕೃತಿಯ ಆರೋಗ್ಯದ ಪೋಷಣೆಗೆ ಪೂರಕವಾದುದು.

ಮಾನವತೆಯನ್ನು ಬಿತ್ತಿ ಜೀವನ ಪ್ರೀತಿಯನ್ನು ಬೆಳೆಯುವ ಅಸಲಿ ಕಸುಬಿನಲ್ಲಿ ಕವಿ ವೀರಪ್ಪ ಮೊಯಿಲಿ ಅವರು ನಿರತರಾಗಿದ್ದಾರೆ. ''ಶ್ರೀ ರಾಮಾಯಣ ಮಹಾನ್ವೇಷಣಂ'' ಅವರ ಕೃತಿ ಪುಷ್ಪ. ಈ ಮಹಾಯಾನದಲ್ಲಿ, ಮಹಾನ್ವೇಷಣೆಯಲ್ಲಿ, ಮಹಾಕಾವ್ಯದಲ್ಲಿ, ಅಲ್ಲಿಯ ಪಾತ್ರಗಳಲ್ಲಿ ಕವಿ ಕಾಣುವುದು 'ಮನುಷ್ಯತ್ವ', ಅನಾಥರ, ನಿರ್ಗತಿಕರ, ಸಾಮಾನ್ಯದಲ್ಲಿ ಸಾಮಾನ್ಯರಾದವರ ನೊಂದವರ ಬೆಂದವರ ಬದುಕನ್ನು ಪ್ರೀತಿಯಿಂದ ಎತ್ತಿ ಮೈದಡವಿ ಸಾಂತ್ವನಗೊಳಿಸಿ ಸಮಜಾಯಿಸಿ ಹೊಸ ಚಿಂತನೆ ಹೊಸ ಹುಮ್ಮಸ್ಸನ್ನು ಮೂಡಿಸಿ ಪ್ರಗತಿ ಪಥದಲ್ಲಿ ಹೆಜ್ಜೆ ಇಡುವಂತೆ ಮಾಡುತ್ತಾರೆ. ಮೊಯಿಲಿ ಅವರ 'ಶ್ರೀ ರಾಮಾಯಣ ಮಹಾನ್ವೇಷಣಂ' ಮಹಾಕಾವ್ಯದ ಪ್ರಧಾನ ಆಶಯ ಜನಪರವಾದುದು. ಯಾವುದು ಜನಪರವಾದುದೋ ಅದು ಸಮಕಾಲೀನವೇ. ಪರಂಪರೆಯನ್ನು ಒಪ್ಪಿಕೊಳ್ಳುತ್ತಾ ನಿಂತ ನೀರಾಗಿರುವ ಸಂಪ್ರದಾಯಗಳನ್ನು ಮೂಲಾಜಿಲ್ಲದೆ ಸವರಿ ಹಾಕುತ್ತಾ, ಮತಧರ್ಮಗಳ ಪೊಳ್ಳುತನ ಬಯಲು ಮಾಡಿ ತನ್ನ ಸುತ್ತಲಿನ ಸಮಾಜ ಸಂಸ್ಕೃತಿಗಳ ಮಿತಿಗಳನ್ನು ಗುರುತಿಸಿ ಜನಸಾಮಾನ್ಯರ ಪರವಾಗಿ ಮಾತನಾಡಲು ಕವಿ ಇಲ್ಲಿ ಪ್ರಯತ್ನಿಸಿದ್ದಾರೆ.

ವೀರಪ್ಪ ಮೊಯಿಲಿ ಅವರು ನ್ಯಾಯವಾದಿಯಾಗಿ, ಶಾಸಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಲೇಖಕರಾಗಿ ಕಾದಂಬರಿಕಾರರಾಗಿ, ಬದುಕಿನ ಕುರಿತು ನಂಬಿಕೆಯನ್ನು ಕುತೂಹಲವನ್ನು ಉಳಿಸಿಕೊಂಡು ಬಂದ ಪ್ರಜ್ಞಾವಂತ ಲೇಖಕರಾಗಿ ಸಮಕಾಲೀನ ಜಗತ್ತಿನೊಂದಿಗೆ ಜೀವಂತ ಸಂಬಂಧವನ್ನು ಇಟ್ಟುಕೊಂಡವರು. ಜಾನಪದ ಬದುಕಿನ ಜೊತೆಗೆ, ಇಪ್ಪತ್ತನೆಯ ಶತಮಾನದ ನಮ್ಮ ನಾಡಿನ ಸಾಂಸ್ಕೃತಿಕ ಪಲ್ಲಟಗಳನ್ನು ಗಮನಿಸಿದವರು. ಗಣರಾಜ್ಯ ವ್ಯವಸ್ಥೆ, ವಿವಿಧ ಸಾಹಿತ್ಯ ಚಳುವಳಿಗಳು, ಗಾಂಧಿ, ನೆಹರು, ಸ್ವಾಮಿ ವಿವೇಕಾನಂದರ, ಲೋಹಿಯಾ, ಜಯಪ್ರಕಾಶನಾರಾಯಣ ಹೀಗೆ ನಾನಾ ವ್ಯಕ್ತಿ ಭಾವಗಳನ್ನು ಕಂಡು ಓದಿ ಬಲ್ಲವರು. ಕೆಳವರ್ಗದ ನೋವು ನಲಿವುಗಳನ್ನು ಕಂಡು ಓದಿ ಬಲ್ಲವರು. ಕೆಳವರ್ಗದ ನೋವು ನಲಿವುಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡವರು. ಈ ಕವಿಗೆ ಇಹಮುಖ್ಯ; ಇಹದ ಬದುಕೂ ಮುಖ್ಯ. ಈ ಮಹಾಕಾವ್ಯದಲ್ಲಿ ಬರುವ ಎಲ್ಲ ಪಾತ್ರಗಳು ಮುಖ ಮಾಡುವುದು 'ಮಹಾನ್ವೇಷಣೆ'ಯ ಕಡೆಗೆ. ಆ ಮಹಾನ್ವೇಷಣೆ 'ಜೀವನ ಶ್ರದ್ಧೆಗೆ' ಸಂಬಂಧಿಸಿದ್ದು. ಸಮಷ್ಠಿ ಪ್ರಜ್ಞೆಯ ಮೂಲಕ ಸಾಮಾಜಿಕ ವಿಕಾಸವನ್ನು ಆಶಿಸುವಂಥದ್ದು.

ಮೊಯ್ಲಿ ವಿರಚಿತ ಶ್ರೀ ರಾಮಾಯಣ ಮಹಾನ್ವೇಷಣಂ ಆಧುನಿಕ ಜನಾಂಗದ, ಬಹು ಸಂಸ್ಕೃತಿಯ ನಾಡಿನ ದರ್ಶನ ವೈವಿಧ್ಯವನ್ನು, ಹೊಸ ಜನಾಂಗದ ಆಸೆ ಆಕಾಂಕ್ಷೆಗಳ ಶೋಧವನ್ನು, ನಮ್ಮ ದುರವಸ್ಥೆಗೆ ಹಿನ್ನೆಡೆಗೆ ಕಾರಣಗಳನ್ನು, ನಮ್ಮ ಬದುಕಿನ ಸತತ ಸಂಘರ್ಷಗಳಿಗೆ ಉತ್ತರವನ್ನು ಅನ್ವೇಷಿಸುವ ಉದ್ದೇಶವನ್ನಿಟ್ಟುಕೊಂಡಿದೆ. ಒಟ್ಟಿನಲ್ಲಿ ನಮ್ಮ ಸಮಾಜಿಕ ಹಾಗೂ ಸಮಕಾಲೀನ ಅರಿವನ್ನು ಮೂಡಿಸುವಲ್ಲಿ ಈ ಕೃತಿಗೆ ವಿಶೇಷ ಮಹತ್ವವಿದೆ.

ಮಿಲ್ಟನ್ ಕವಿಯ ಪ್ಯಾರಡೈಸ್ ಲಾಸ್ಟ್, ಪ್ಯಾರಡೈಸ್ ರೀಗೇನ್ಡ್ ಆದ ಮೇಲೆ ಯಾವ ಭಾಷೆಯಲ್ಲೇ ಆಗಲಿ ಈ ಪ್ರಮಾಣದ ಒಂದು ಮಹಾಕಾವ್ಯ ಬಂದದ್ದನ್ನು ಕಾಣೆ'' ಎಂದು ದಿವಂಗತ ರಾಷ್ಟ್ರಕವಿ ಗೋವಿಂದ ಪೈ ಅವರು ಕುವೆಂಪುರವರ 'ರಾಮಾಯಣ ದರ್ಶನಂ ' ಕೃತಿಯ ಕುರಿತು ಹೇಳಿದ್ದುಂಟು. ಅನಂತರ ಕನ್ನಡದಲ್ಲಿ ಭೂಸನೂರುಮಠ, ಜಯದೇವಿತಾಯಿ ಲಿಗಾಡೆ, ಎಸ್. ರಾಮರಾಯರು, ವಿ.ಕೃ. ಗೋಕಾಕ, ಪುತಿನ ಮೊದಲಾದವರು ಮಹಾಕಾವ್ಯವನ್ನು ರಚಿಸಿ ದೊಡ್ಡ ಪರಂಪರೆಯನ್ನೇ ಹಾಕಿಕೊಟ್ಟರು. ಈಗ ಮೊಯಿಲಿ ಅವರ ಸರದಿ. ಇದು 21ನೆಯ ಶತಮಾನದ ಮೊದಲ ಮಹಾಕಾವ್ಯವೂ ಹೌದು. (2001ನೆ ಸಾಲಿನಲ್ಲಿ ಭಾರತೀಯ ಭಾಷೆಗಳಲ್ಲಿಯೂ ಮಹಾಕಾವ್ಯ ಬಂದಂತೆ ಕಾಣುವುದಿಲ್ಲ. ಇದು ನಿಜವಾದರೆ ಮೊಯಿಲಿ ಅವರ ಕೃತಿಗೆ ಚಾರಿತ್ರಿಕ ಸ್ಥಾನಮಾನ ಸಿಗುವುದರಲ್ಲಿ ಸಂದೇಹವಿಲ್ಲ) 'ಶ್ರೀ ರಾಮಾಯಣ ಮಹಾನ್ವೇಷಣಂ ' ಎಂಬ ಮಹಾಕಾವ್ಯವನ್ನು ಬರೆದ ಅವರು ಕನ್ನಡ ಸಾಹಿತ್ಯ ಕ್ಷೇತ್ರದ ಶಕಪುರುಷರ ಸಾಲಿಗೆ ಸೇರಿದ್ದಾರೆ.

ರಾಮಾಯಣ ಬರೇ ಚರಿತ್ರೆಯಲ್ಲ; ಪುರಾಣವಲ್ಲ. ಬದುಕಿನ ನಿತ್ಯ ಸತ್ಯವನ್ನು ತೆರೆದು ತೋರುವ ದರ್ಶನದಲ್ಲಿ ಅಡಗಿದೆ. ಅದು ಈ ನಾಡಿನ ಆದಿಕಾವ್ಯ. ಅದೊಂದು ಮಹತ್ವದ ಬೃಹತ್ತಾದ ಭಾವಗೀತೆ. ನಮ್ಮ ನಾಡಿನ ಜನರನ್ನು ಅದು ಶತಶತಮಾನಗಳಿಂದ ಕೈಹಿಡಿದು ನಡೆಸಿದೆ. ಅದೊಂದು ಮಹಾನ್ ಶಕ್ತಿ. ರಾಮಾಯಣ ನಮ್ಮ ಭಾವಕೋಶದಲ್ಲಿ ಸೇರಿಹೋಗಿ ಬಿಟ್ಟಿದೆ. ಅಲ್ಲಿನ ಘಟನೆಗಳು, ಸ್ಥಳಗಳು ನಮಗೆ ಭೌಗೋಳಿಕ ಸತ್ಯಗಳಾಗಿವೆ. ರಾಮಾಯಣದಲ್ಲಿ ಸಮಸಾಮಯಿಕವಾದ ಅನೇಕ ಘಟನಾವಳಿಗಳಿವೆ. ವಿಷಯಗಳಿವೆ. 'ಮನುಷ್ಯನ ಧರ್ಮ ಏನು? ಎಂಬ ಚಿರಂತನ ತತ್ತ್ವದ ಮೇಲೆ ಈ ಮಹಾಕಾವ್ಯ ನಿಂತಿದೆ. ನಮ್ಮ ಸನ್ನಡತೆಯಿಂದ ಬದುಕು ಹೇಗೆ ಹಸನಾಗಬಲ್ಲದು ಎಂಬುದನ್ನು ತಿಳಿಹೇಳುತ್ತದೆ. ಮನುಷ್ಯನ ಕರ್ತವ್ಯವನ್ನು ಕುರಿತು ಇದು ಮತ್ತೆ ಮತ್ತೆ ಮಾತನಾಡುತ್ತದೆ. ನಮ್ಮ ಸಂವಿಧಾನದಲ್ಲಿ ಲಿಖಿತ ಕರ್ತವ್ಯಗಳ ಉಲ್ಲೇಖವಿದ್ದರೆ ಅಲ್ಲಿ ಅಲಿಖಿತವಾದ ಬದುಕಿಗೆ ಬೇಕಾದ ಕರ್ತವ್ಯಗಳಿವೆ. ''ಒಳ್ಳೆಯ ಮನಸ್ಸು ಒಳ್ಳೆಯ ನಡತೆಯಿಂದ ಒಳ್ಳೆಯದಾಗುತ್ತದೆ. ಕೆಟ್ಟ ಮನಸ್ಸು ಕೆಟ್ಟ ನಡತೆಯಿಂದ ಕೆಟ್ಟ ಪ್ರತಿಫಲವನ್ನು ಅನುಭವಿಸಬೇಕಾಗುತ್ತದೆ '' ಎಂಬುದನ್ನು ಅದು

ಹೇಳುತ್ತದೆ. ರಾಮಾಯಣದಲ್ಲಿ ನಿರೂಪಿತವಾದ ಮೌಲ್ಯಗಳು ಸರ್ವತೋಮುಖ ಅಭಿವೃದ್ಧಿಗೆ ಹೆದ್ದಾರಿಯಾಗಿದೆ ಎಂಬುದನ್ನು ಮೊಯಿಲಿ ಅವರು ಕಂಡುಕೊಂಡಿದ್ದಾರೆ. ಅವರು ಬರೇ ರಾಜಕಾರಣಿಯಲ್ಲ; ರಾಜಕೀಯದಲ್ಲಿ ಅವರು ಕಳೆದು ಹೋದವರೂ ಅಲ್ಲ. ಬರೆ ಕನಸುಗಾರರೂ ಅವರಲ್ಲ. ನಾಡಿನ ಆಡಳಿತದ ಚುಕ್ಕಾಣಿ ಹಿಡಿದು ಅದರ ಸಾರಥ್ಯವಹಿಸಿ ರಾಮರಾಜ್ಯದ ಕನಸನ್ನು ನನಸುಗೊಳಿಸಲು ಪ್ರಯತ್ನಿಸಿದವರು.

ಮೊಯಿಲಿ ಅವರ ಮಹಾಕಾವ್ಯದಲ್ಲಿ ಮೂಲಕ್ಕಿಂತ ಭಿನ್ನ... ರೀತಿಯ ಚಿಂತನಗಳಿವೆ. ಕಥೆಯ ಮೂಲ ಆಶಯಕ್ಕೆ ಚ್ಯುತಿ ಬರದಂತೆ ಕೆಲವು ಮಹತ್ವದ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಕಥೆಯ ನಡುನಡುವೆ ಪರಿಸರ ಸಂರಕ್ಷಣೆ, ಪುನರ್ವಸತಿ, ಸಮಾನತೆ, ಸಮಾಜೋದ್ಧಾರ, ವಿಜ್ಞಾನದ ಅಗತ್ಯತೆ, ಶಿಕ್ಷಣದ ಮೂಲಕ ಜಾಗೃತಿ, ಭ್ರಾತೃತ್ವ, ಆತ್ಮ ವಿಮರ್ಶೆ, ಉದಾತ್ತವಾದ ನೀತಿಯ ಅರಿವು, ದರ್ಶನ ಸಾಮರ್ಥ್ಯ, ದೂರಾಲೋಚನೆ, ತಾಳ್ಮೆ, ಶಾಂತಿ, ಸಹಕಾರ, ಸಹಬಾಳ್ವೆ ಮೊದಲಾದ ಗುಣಗಳನ್ನು ತತ್ವಗಳನ್ನು ಸಮಕಾಲೀನ ನೆಲೆಗೆ ಅನ್ವಯಿಸಿ ಚರ್ಚಿಸಿದ್ದಾರೆ. ಸಮಕಾಲೀನತೆ ಒಂದು ಯುಗಮಾನದ 'ಭಾವಲಹರಿ' ಎಂಬುದನ್ನು ಒಪ್ಪಿಕೊಂಡಾಗ ಮೊಯಿಲಿ ಅವರ ಮಹಾನ್ವೇಷಣೆಗೆ ಹೊಸ ಹೊಸ ಅರ್ಥಗಳು ಪ್ರಾಪ್ತವಾಗುತ್ತದೆ. ಶ್ರಮ ಸಂಸ್ಕೃತಿ, ಮಾನವೀಯ ಅಂತಃಕರಣ, ಸಮಬಾಳು, ಸಮುದಾಯ ಹಿತ ಮೊದಲಾದ ಮೌಲ್ಯಗಳು ಮೊಯಿಲಿ ಅವರಿಗೆ ಪ್ರಿಯವಾದವು. ಹಾಗಾಗಿ ಅವರ ನಾಯಕರೂ ಈ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ರಾಮಲಕ್ಷ್ಮಣ ಸೀತೆ ಮೊದಲಾದವರು ಕವಿಗೆ ಬರೆ ದೇವತೆಗಳಲ್ಲ. ಅವರು 'ಮಾನವ ಪ್ರಜ್ಞೆ ಜಾಗೃತಗೊಳಿಸಿದ ಮಹಾನುಭಾವರು' ಯುಗಮನದ ಸಂಸ್ಕೃತಿಯ ವಿಚಾರಧಾರೆ, ಸಮಾಜ ಪ್ರಜ್ಞೆ, ಸದ್ಧರ್ಮ, ಸಭ್ಯತೆಯ ಪ್ರತೀಕವಾದವರು. 'ಮಾನವ ಜಾತಿ ತಾನೊಂದೇ ವಲಂ' ಎಂಬ ಮಹಾಕವಿ ಪಂಪನ ಮಾತನ್ನು ಕವಿ ಇಲ್ಲಿ ದಶರಥನಿಂದ ಆಡಿಸುತ್ತಾನೆ. ಸಂದರ್ಭ ಹೀಗಿದೆ. ದಶರಥ ಪುತ್ರ ಸಂತಾನ ಪ್ರಾಪ್ತಿಗಾಗಿ ಯಾಗವೊಂದನ್ನು ಭರ್ಜರಿಯಾಗಿ ಹಮ್ಮಿಕೊಂಡಿದ್ದಾನೆ. ಮಧ್ಯಾಹ್ನದ ಊಟದ ಹೊತ್ತು ಚಂದ್ರಶಾಲೆಯ ಬಳಿ ಹಸಿದ ಭಿಕ್ಷುಕರು ಅಲ್ಲಿಯ ಸೈನಿಕರಿಂಧ ಛೀಮಾರಿ ಹಾಕಿಸಿಕೊಂಡು ಎಂಜಲೆಲೆಯಿಂದ ಆಯ್ದು ತಿನ್ನುವುದು ದಶರಥನ ಗಮನಕ್ಕೆ ಬರುತ್ತದೆ. ಆತ ತಕ್ಷಣ.

''ಏನಿದೇನಿದು ಭೋಜನ
ಶಾಲೆಗೆ ಬಾರದೆ ನೀವು ಕೈಯೊಡ್ಡಿದಿರೆ ಎಂಜಲಿಗೆ
ಆಗದಾಗದು ಸಲ್ಲದು ಲೋಪ ಪಾಪವ ಸಹಿಸೆನು...
ಸರ್ವರೂ ಸಮನಿಲ್ಲಿ ಭೇದ ಭಾವವು ಸಲ್ಲ ಶೋಷಕರು ಇರಲಾಗಿ ಶೋಷಿತರು ತಾವಿಹರು ಸಮಪಂಕ್ತಿ ಸಮಭಾವ ಸಹಕಾರ ಸೌಹಾರ್ದ ಸಹಭೋಜನ ಸಹವಿಚಾರ ಸಹಚಿಂತನವಿಲ್ಲಿ... ಕೀಳಿಲ್ಲ ಮೇಲಿಲ್ಲ ಮನುಜಕುಲ ಒಂದೆಂಬ ತತ್ವವನು ಸಾರಿರುವ ಬಹುಪುಣ್ಯ ಭೂಮಿಯಿದು '' ಎನ್ನುತ್ತಾನೆ. ಅಷ್ಟೇ ಅಲ್ಲ, ''ಮನುಜ ಭೇದವ ಮಾಜಿ ಮರಣದಂಡನೆಯೆಂಬ ರಾಜಾಜ್ಞೆ''ಯನ್ನು ಹೊರಡಿಸುತ್ತಾನೆ. ಹೃದಯ ಹೃದಯದ ನಡುವೆ ಎದ್ದಿರುವ ಕೋಟೆಗಳ ಕೆಡವಿ ತುಂಡರಿಸಬೇಕಾದ ಅಗತ್ಯವನ್ನು ಕವಿ ಇಲ್ಲಿ ಎತ್ತಿಹಿಡಿದಿದ್ದಾರೆ. ದೀನದಲಿತರ ಬಾಳು ಸುಧಾರಿಸಬೇಕು; ಬಡವ ಬಲ್ಲಿದರೆಂಬ ಭೇದ, ಮೇಲು ಕೀಳೆಂಬ ತಾರತಮ್ಯ ನೀಗಬೇಕು. ಸರ್ವೋದಯ ತತ್ವಗಳು ಸಾಕಾರಗೊಳ್ಳಬೇಕು. ಶೋಷಣಾರಹಿತವಾದ ಸಮಾಜವೊಂದು ರೂಪು ತಳೆಯಬೇಕು ಎಂಬುದು ಕವಿಯ ಹಿರಿಯಾಸೆ.

''ಬಿಲಗಳಿವೆ ಇಲಿಗಳಿಗೆ ಇಲಿಗಳಿಗೆ, ಗೂಡು ಹಾಡು ಹಕ್ಕಿಗಳಿಗೆ ಮನುಜನಿಗಿಲ್ಲ ಮಲಗಿ ನಿದ್ರಿಸೆ ಗೇಣು ಜಾಗ... ಕಮರಿ ಹೋಗಿದೆ ಸ್ವತಂತ್ರ ಚಿಂತನೆ, ಉಸಿರುಗಟ್ಟಿದೆ ನಲುಗಿದೆ ನ್ಯಾಯ ಸಂಸ್ಕೃತಿಯ ಭಾರತದ ಬದುಕು'' ಎಂಬ ವಾಸ್ತವದ ಅರಿವೂ ಕವಿಗಿದೆ. ಆದರೂ ಕವಿ ಆಶಾವಾದಿ. ಶಾಂತಿ ಸ್ಥಾಪನೆಗೆ ಹೊರಟಿರುವ ರಾಮ ಲಕ್ಷ್ಮಣರಿಗೆ ವಿಶ್ವಾಮಿತ್ರ ಹೇಳುವ ಮಾತು ನಮ್ಮ ಭಾವಿ ಪ್ರಜೆಗಳನ್ನು ಉದ್ದೇಶಿಸಿ ಹೇಳಿದ ಮಾತು ''ಯುಗಧರ್ಮವಿದೆಯೆಂದು ತಲೆ ಚಚ್ಚಿ ಬರುವುದೇ ಸ್ವರ್ಗ ಸೌಭಾಗ್ಯಕಾಲ ಬುಡಕೆ?, ನಾವಿಕರು ನೀವಾಗಿ, ನಾಳೆ ಬರಲೆಂದೆನುತ ಕಾಯೆ ಹಳಸಲ್ಲುವುದು. ಆದಾನ ಪ್ರದಾನ ಪ್ರಯೋಗ ವಿಜ್ಞಾನ, ಮಾನವರ ದೇವರಾಗಿಸುವ ಸಿದ್ಧಾಂತ ಬೆಳೆಯಲಿ, ಗೋರಿ ಸೇರಲ್ಹಿ ವರ್ಣಜಾತಿಗಳ ಕಾಟಾಚಾರ, ವಿಜ್ಞಾನ ಸೊಗಡ ಅನ್ವೇಷಣೆಯ ಮಹಾಯಾತ್ರೆಯಲಿ ಜಗವು ಕಾಣಲಿ ಬೆಳಕು''. ಸತ್ಯಾನ್ವೇಷಣೆಯೆ ನಮ್ಮ ಬದುಕಿನ ದೀಕ್ಷೆಯಾಗಬೇಕೆಂಬುದು ಕವಿಯ ಹಿರಿಯಾಸೆ.

ಮನುಷ್ಯ ಬರೇ ಪ್ರಾಣಿಯಲ್ಲ. ಬಲ ಪ್ರಯೋಗ, ಕಾನೂನಿನಿಂದ ಎಲ್ಲವನ್ನೂ ಬದಲಾಯಿಸಲು ಚಿಕಿತ್ಸೆಗೊಳಿಸಲು ಸಾಧ್ಯವಿಲ್ಲ. 'ದಾನವತೆ ಅಳಿಯಬಳಿಕೆ ಕೊಲುವುದೊಂದೇ ಮಾರ್ಗವಲ್ಲವು, ಮಾನವತೆಯ ಸಿಂಚನವ ಮಾಡೋಣ' ಪ್ರೀತಿ ಕಾರುಣ್ಯಗಳೆ ಜಗವ ಉಳಿಸುವ ಗಾರುಡಿಯು, ಲೇಸಲ್ಲ ವಧೆ; ಸಹನೆಲೇಸು' ಎಂಬಲ್ಲಿ ಮನುಕುಲದ ಉಳಿವಿನ ಬಗೆಗೆ ಕವಿಗಿರಿರುವ ಕಾಳಜಿ ಹೃದಯ ವೈಶಾಲ್ಯ ಗಮನಾರ್ಹವಾದ ಅಂಶ.

''ಮನುಜ ಜನಿಸಲು ಜನನಿಗೆ ನೋವು ಸಂಕಟವು, ಮರಣದಿ ನೋವು ತನಗೆ ಎರಡು ನೋವುಗಳ ನಡುವೆ ಬಾಳುವ ಬವಣೆಯೆ ನೋಂಪಿ ಎಮ್ಮ ನೋವ ಮರೆತು ಪರರ ನೋವ ನಿವಾರಿಸಲು ಹೋರಾಡಿ ಬದುಕವೊಡೆ ಬೆಳೆವುದಾರ್ಯ ಸಂಸ್ಕೃತಿಯು ಮಾನವನ ಬದುಕು ಹಸನಾಗಬೇಕಾದರೆ ಏನೆಲ್ಲ ಬೇಕೋ ಅದೆಲ್ಲದರ ಬಗೆಗೆ ಕವಿ ಮನಸ್ಸು ಚಿಂತಿಸಿದೆ. ಶಾಂತಿ ಸಹನೆ ಸಹಕಾರದಲ್ಲೆ ಜಗತ್ತಿನ ಏಳಿಗೆ ಎಂಬ ಮಾತು ಯಾವ ಕಾಲಕ್ಕೂ ಸಲ್ಲುವಂಥದ್ದು. ಯುದ್ಧ ಸಂಸ್ಕೃತಿಯಲ್ಲಿ ತೊಡಗಿರುವ ನಮಗಿಂದು ಬೇಕಾಗಿರುವುದು ಕವಿ ಹೇಳುವ ಶಾಂತಿ ಮಂತ್ರವೇ. ಈ ಮೌಲ್ಯಗಳು ಬರೇ ಸಮಕಾಲೀನ ಮೌಲ್ಯಗಳಷ್ಟೇ ಅಲ್ಲ. ಸಾರ್ವತ್ರಿಕ ಮೌಲ್ಯಗಳೂ ಹೌದು.

ಕಾರ್ಲ್ ಮಾರ್ಕ್ಸ್ ಹೇಳುವ ಸಮಾಜದ ಕೆಳಸ್ತರದ ರಚನೆಯ ಕುರಿತೂ ಮೊಯಿಲಿ ಅವರು ಈ ಮಹಾಕಾವ್ಯದ ಒಳಗೆ ಅಲ್ಲಲ್ಲಿ ಮಾತನಾಡಿದ್ದಾರೆ. ಯಜಮಾನ ಸಂಸ್ಕೃತಿಯನ್ನು ಅವರು ಬಲವಾಗಿ ಖಂಡಿಸಿದ್ದಾರೆ. ಕರ್ಮ ಸಿದ್ಧಾಂತದಲ್ಲಿ ಸಿಕ್ಕು ನುಗ್ಗಾಗಿರುವ ಜನ ಅನ್ಯಾಯ ಅವ್ಯವಸ್ಥೆಯನ್ನು ಪ್ರತಿಭಟಿಸುವ ಬಂಡೇಳುವ ಸ್ಥಿತಿಯಲ್ಲಿಯೂ ಇಲ್ಲ.

''ದುಃಖ ಜ್ವಾಲೆಯಲಿ ಬೆಂದಿರುವ
ದೀನ ದುರ್ಬಲರಿಂಗೆ ಸುಖವ ನೀಡಲು ಬೇಕು
ಮೂಕರಾಗಿಹ ಜನಕೆ ದನಿಯ ನೀಡಲು ಬೇಕು
ಪಾತಾಳದಿಂ ವರಾಹಮೂರ್ತಿ ಧರಣಿಯನ್ನೆತ್ತಿದೊಲು
ಮಾನವತೆಯ ಮರ್ಯಾದೆಯನು ಮೇಲೆತ್ತಬೇಕು''

ಎನ್ನುವ ಕವಿಗೆ, ''ವಿವಿಧ ಪಂಥಗಳೆಲ್ಲ ಪರಿಮಿತಿಗೆ ನಿಲುಕುತ್ತ ಜಗವೆ ಸಂಘರ್ಷ ಭೂಮಿಯಾಗಿಹುದು'' ''ಬೇಕಿಂದು ಸರ್ವರನು ಏಕ ಸೂತ್ರದಿ ಜೋಡಿಸುವ ಸತ್ಯರೂಪಕದ ತುರ್ತನ್ನೂ ಕಂಡುಕೊಂಡಿದ್ದಾರೆ. 'ಜ್ಞಾನಕ್ಕೆ ಮಿಗಿಲಾದ ವಸ್ತು ಲೋಕದೊಳಿಲ್ಲ, ದಲಿತ ಶೂದ್ರರು ಸಹಿತ ಸರ್ವರಿಗೂ ಜ್ಞಾನದ ಬೆಳಕು ಲಭ್ಯವಿರಬೇಕು. ತನ್ನಂತೆ ಸರ್ವರನು ಪ್ರೀತಿಯಲಿ ಕಾಂಬುದು' ಎಂಬ ತತ್ತ್ವವನ್ನು ಮತ್ತೊಮ್ಮೆ ಘೋಷಿಸಲು ಪುಣ್ಯಪುರುಷನೊಬ್ಬ ಜನ್ಮತಾಳಿ ಬರಬೇಕೇ? ಎಂಬುದಾಗಿ ಕವಿ

(ಪುಟ 10ಕ್ಕೆ)

# The Mysore Association's

# PLATINUM JUBILEE CELEBRATION

The Mysore Association Bombay has completed 75 years. In the Silver Jubilee year the 2nd floor of the building was planned and executed in about 10 years to commemorate the event. In the Golden year, Mysore Association initiated an Endowment to the Dept. of Kannada, University of Mumbai. The lecture series are held regularly. In the Diamond year the Association undertook the project building fully equipped 300 seater air conditioned auditorium suitable for performing arts and related activities. Now in the Platinum year it has decided to set up a Composite Training Centre for performing arts. The auditorium, a Conference hall accommodating 125-150 persons, infrastructural facilities, allegiant interior Décor and good ambience all provide a perfect setting for such a training centre. In addition to this we need to build lecture hall, rehearsal hall art gallery well stacked and well maintained library, staff roof and rooms for visiting troupes and facilities to completely meet the requirements of the training centre. In order to fulfill these aims we need to collect about Rs. 2 crores in the coming years.

**THE CELEBRATIONS:**

The Platinum Jubilee Celebrations . Cultural Programmes one part of Bhakti Sangam in October where in the essence of "Devotions" as popularised by the Kannada and Marathi Saints through music was presented in the form of lecture/ demonstration and classical Rendition were highly appreciated and enjoyed by all participants. On November 4th, there was a puppet show - Janapada Gombeyata by Bhaskar kamat of Shri. Ganesh Gombeyata Yakshagana Mandali of the famous Kogga family of Kundapura, Karnataka. The programme had the audience totally involved and received high acclaimed. The celebrations will continue till end January 2002.

## PROGRAMMES IN NOVEMBER & DECEMBER - 2001

**Screening of Award Winning Films 'Kannoru Heggadathi'' & ''Matadana' at various locations in Mumbai from 23rd Nov. to 5th December. Details are as under Schedule of screening Films.**

**THE FILMS :**

| Date | Sponsoring Organisation | Film |
|---|---|---|
| 27-11-2001 | Mysore Association, Bombay | Matadana |
| 28-11-2001 | Mysore Association, Bombay | Kanooru Heggadithi |
| 23-11-2001 | Kannada Mitra Sangha, Anushakti Nagar | Matadana |
| 24-11-2001 | Kannada Sangha, Navi Mumbai | Kanooru Heggadithi |
| 25-11-2001 | Kannada Sangha, Navi Mumbai | Matadana |
| 26-11-2001 | Chembur Karnataka Sangha | Kanooru Heggadithi |
| 27-11-2001 | Billawara Sangha, Santacruz | Kanooru Heggadithi |
| 28-11-2001 | Chembur Karnataka Sangha | Matadana |
| 02-12-2001 | Kalamadhyama, Thane | Kanooru Heggadithi |
| 05-12-2001 | NKES, Wadala | Matadana |

On 27th & 27th actress Tara, Director T.V. Seetharam, Producer Sri Vittal Murthy and other members of the team will be in Mumbai and will attend the screening events.

## KARNATAKOTSAV

| | | |
|---|---|---|
| 29-11-2001 | 6.30 p.m. | Inauguration of Karnatakotsava<br>Exhibition of Painting & Sculptor |
| Thursday | 7.00 p.m. | Bharatha Natyam by Kum. Sneha Shree disciple of Smt. Bhanumathi |
| 08-12-2001 Saturday | 7.00 p.m. | Nityotsava - A Programme of Sugama Sangeeta |
| 09-12-2001 | 11.00 a.m. | Kavighosti - Leading Kannada & Marathi poets will read their works and<br>Kavya Gayana - will known singers will under these composition set to music |

## KARNATAKOTSAV

| | | |
|---|---|---|
| Saturday 01-12-2001 | 6.30 p.m. | Inauguration of Theatre Festival |
| | 7.00 p.m. | play **"Mahipatha Kwanana Tambgi M.A."** |
| Sunday 02-12-2001 | 5.00 a.m. | Seminar on Indian Theatre |
| | 8.00 p.m. | Speakers from English, Hindi, Marathi, Kannada, and Gujarathi Theatre, open-House and Discussion |
| | | A Short Play in Kannada "Hucheriya Esarina Prasanga" |
| Monday 03-12-2001 | 7.00p.m. | "Kargil" in Hindi by IPTA |
| | | Original Kannada work adopted into a play in Hindi |
| Tuesday | | "Man Hi Man Dalla Naache" in Hindi |
| 04-12-2001 | 7.00 p.m. | Original Kannada play by T.N. Seetharam translated into Hindi |
| Wednesday 05-12-2001 | 7.00 p.m. | "Aragina Betta" in Kannada |
| | | Written by Hooli Shekhar |
| Thursday 06-12-2001 | 7.00 p.m. | " Rudaali" in Kannada |
| | | Original Bengali play translated into Kannada |
| Friday 07-12-2001 | 7.00 p.m. | "Yayati" in Marathi |
| | | Original play in Kannada by Girish Karnad translated into Marathi |

Throughout the 10 days festival - Karnatakotsav a Food Festival of delicacies and specialties of various parts Karnataka will be held at the Association where you can taste mouth watering preparation for break-fast, Lunch and Dinner. Although the entire festival is open for public and admission is free for all, the food festival is an exception and it is a paid service.

### THE FUND RAISING PROGRAMME.

On Saturday 19/01/2002 at 7.00 p.m. we have Hindustani Flute Recital by Pt. Hariprasad Chaurasia at Nehru Centre it is a Fund Raising Programme and needs active participation of all members and well wishers of the Association.

You can help with your active participation by :

1. Buying tickets for yourself and your family members and friends
2. Helping in sale of tickets to friends, general public
3. Procuring advertisement
4. By sponsoring the events
5. By getting sponsors for the events
6. By generating publicity for the events.

Lets all join hands to make it grand success. So that the Magical Aura of Karnataka leaves a lasting impact on the minds of the populace.

### ADVERTISEMENT TARIFFS

| Advertisement | Rate Rs. | Advertisement | Rate Rs |
|---|---|---|---|
| Back Cover - Colour | 25,000/- | Inside Covers - Colour | 20,000/- |
| Book Mark - Colour | 15,000/- | Full Page – Colour | 10,000/- |
| Half Page - Colour | 7,500/- | Half Page – Black & White | 2,500/ |
| Full Page – Black & White | 5,000/-- | | |

Technical Data: Print Area : 25 cms x 20 cms Printing : by Offset Process Matter to be given as Art Work / Positive

**Display of Banners** Rs.10,000/-

Banners should not be larger than 6' x 2.5 '

Members/Readers are requested to send the Ad matter/banner bookings to

The Hon. Secretary
The Mysore Association
393, Bhaudaji Road, Matunga, Mumbai-400 019.
Ph.: 4024647/4037065 Fax: 401 0574

(ಪುಟ 7 ರಿಂದ)

ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ.

ಬದುಕಿಗೆ ಬೆನ್ನು ಹಾಕುವುದು ತರವಲ್ಲ. 'ಬದುಕು ಅಪೂರ್ವವಾದ ಅವಕಾಶ' ಎಂದು ಭಾವಿಸಿ ಬಾಳುವೆ ನಡೆಸಬೇಕೆಂದು ಅಹಲ್ಯೆಯ ಕಥೆಯಮೂಲಕ ಸಾರಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ 'ಲಿಂಗ ಸಮಾನತೆ' ಎಂಬುದು ಇಂದಿಗೂ ಮರೀಚಿಕೆಯೇ ಆಗಿದೆ.

''ಪುರುಷ ಮಾಡಲು ಬಲ್ಲ ಪಿತೃಶ್ರಾದ್ಧ ಕರ್ಮಗಳ
ಸ್ತ್ರೀ ಗಿಲ್ಲ ಅದರ ಅಧಿಕಾರ; ಆತ್ಮವೊಂದೆ
ಎನಲು
ಹೆಣ್ಣೆಂಬ ಗಂಡೆಂಬ ಭೇದವಿನಿತೇಕೆ ?
ಹೆಣ್ಣುಕುಲ ಅನುಭವಿಸಿಹ ಸಂಕಟವ ನೀಡ
ಪರಿಹರಿಸಲೇ ಬೇಕು'' ಎಂಬುದನ್ನು ಎತ್ತಿ ಹೇಳಿದ್ದಾರೆ.

ಮೂಲತಃ ಕವಿಯದು ಬಂಡಾಯ ಮನೋಧರ್ಮ. ಆದರೆ ಅಲ್ಲಿ ರಕ್ತ ಪಾತಕ್ಕೆ ಎಡೆಯಿಲ್ಲ. ತಣ್ಣನೆಯ ಕ್ರಾಂತಿಯನು ಆಶಿಸಿ ''ಸರ್ವರನು ಪ್ರೇಮದಲಿ ಬೆಸೆಯುವಾ ಶಾಂತಿಯುತ ಕ್ರಾಂತಿ '', ಆ ಮೂಲಕ ''ಶ್ರೀ ಸಾಮಾನ್ಯರ ಯುಗೋದಯ'', ಆದುವೆ ಎಲ್ಲರೂ ಬಯಸುವ ರಾಮರಾಜ್ಯವೆಂದಿದ್ದಾರೆ. ಗಾಂಧೀಜಿ ಅವರ ಆದರ್ಶ, ಅವರ ಬದುಕು ಬರಹ ನಮಗೆ ಮಾರ್ಗದರ್ಶಿ ಎಂಬ ದೃಢ ನಿಲುವು ಮೊಯಿಲಿ ಅವರದು. ಈ ಎಲ್ಲ ಕಾರಣಗಳಿಂದ 'ಮೊಯಿಲಿ ಅವರ ಶ್ರೀ ರಾಮಾಯಣ ಮಹಾನ್ವೇಷಣಂ ಆಧುನಿಕ ವಿಶ್ವದ ಹೊರಗಿನ ಒಳಗಿನ ನೂರು ಸ್ವರಗಳನ್ನು, ನೂರು ಸ್ತರಗಳನ್ನು ಧ್ವನಿಸುತ್ತಾ ಸಮಕಾಲೀನ ಪ್ರಜ್ಞೆಯನ್ನು ತನ್ನ ಮಡಿಲಲ್ಲಿ ಕಾಪಿಟ್ಟುಕೊಂಡು ಬೆಳೆದಿದೆ. ನಾವು ಆಧುನಿಕಯುಗದ ತುತ್ತ ತುದಿಯಲ್ಲಿದ್ದರೂ ಸಮಾನತೆಯ ಕುರಿತು ಮಾತನಾಡುತ್ತಿದ್ದೂ ಜಗತ್ತಿನೆಲ್ಲೆಡೆ ಹೆಮ್ಮು ಹೆತ್ತವರ ಗೋಳು ತಪ್ಪಿಲ್ಲ. ಮೊಯಿಲಿ ಅವರ 'ಜನಕ ಮಹಾರಾಜ'ನೂ ಈ ತಲೆಬಿಸಿಯಿಂದ ಮುಕ್ತನಾಗಿಲ್ಲ. ಇದೊಂದು ಸಮಕಾಲೀನ ಸಾಮಾಜಿಕ ಸಮಸ್ಯೆ ಎಂಬ ಅರಿವು ಕವಿಗಿದೆ. 'ಆರಿವಳು ಸೀತೆ'? ಎಂಬ ಜನ್ಮ ಸಂದೇಹ ಒಂದು ಕಡೆಯಾದರೆ, ಮತ್ತೊಂದು ಕಡೆ ಅನುರೂಪನಾದ ಗಂಡು ಸಿಗದೆ ತೊಂದರೆ ಎದುರಿಸುತ್ತಾರೆ.

''ಮಂತ್ರಿ ಮಾಗಧರು ಸೀತೆಗೆ ವರನ ಹುಡುಕುತ್ತ
ಆರ್ಯಾ ವರ್ತಕದಲಿ ಅಲೆದಾಡಿ ಬೇಸತ್ತು
ಮರಳಿದರು
ವರಿಸುವ ಅನುರೂಪ ವರನ ಕಾಣದೆಯೆ !''

ದುಃಖ ದುಮ್ಮಾನದಲಿ ಜನಕ ಮಮ್ಮಲ ಮರುಗುತ್ತಾನೆ. ಹೆಣ್ಣು ಹೆತ್ತ ತಂದೆ ತಾಯಿಗಳ ಸಂಕಟವನ್ನು ಕವಿ ಇಲ್ಲಿ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ.

''ಏಕೀ ಭೇದ ಖೇದವು ಮಾನಿನಿಯರ ಸಮುದಾಯಕೆ''? ಎಂಬ ಕವಿ ಪ್ರಶ್ನೆಗೆ ಉತ್ತರವೆಂದು ಸಿಕ್ಕೀತು?

ರಾಮ ಜನ್ಮಭೂಮಿ - ಬಾಬ್ರಿ ಮಸೀದಿ ದೊಂಬಿಯಲ್ಲಿ ಸಾಂಸ್ಕೃತಿಕ ದಿಗ್ವಿಜಯದ ನೆಪದಲ್ಲಿ ಮಾಡಿದ್ದಾದರೂ ಏನು? ' ವಿಕೃತ ಸೇಡಿನ ಲಾವಾ ರಸವೇ ಉರುಳಿಸಿತು. ಮೂರು ಗೊಮ್ಮಟವ' ಯುಗಯುಗದ ನಮ್ಮ ಸಂಸ್ಕಾರವೇನಾಯ್ತು? ಎಂದು ಅಂಧಕೃತ್ಯವನ್ನು ವಿರೋಧಿಸಿದ್ದಾರೆ. ''ಹಿಂಸೆ ಸ್ಫೋಟನದೊಳಗೆ ಬಿರಿಯುತ್ತಿದೆ ಜಗವೆಲ್ಲ ವಿಶ್ವವೇ ಮನೆಯಾಗಿ'', ''ಆಂತರಿಕ ವೈರುಧ್ಯಗಳೆ ಜಗದ ನಾಗರಿಕತೆಗಳ ನುಂಗಿಹವು'' ಎಂಬುದನ್ನು ಮನಗಂಡಿರುವ ಕವಿ 'ಸಹಜೀವನ ನಡೆಸಿಶಾಂತಿಯಲಿ ಬಾಳೋಣ', ಸರ್ವರೂ ಪುರುಷೋತ್ತಮರಾಗಲಿ ಎಂದು ಹಾರೈಸಿದ್ದಾರೆ.

ನಾವು ಒಳ್ಳೆಯವರಾಗಬೇಕು, ನಮ್ಮಲ್ಲಿ ಒಳ್ಳೆಯತನವಿರಬೇಕು. ಅಂದಾಗ ಮಾತ್ರ ಜಗತ್ತು ನಮ್ಮನ್ನು ಗೌರವಿಸುತ್ತದೆ ಎಂಬುದು ಕವಿ ಕಂಡುಕೊಂಡ ಸತ್ಯ. ಅದನ್ನು ರಾಮನ ಬಾಯಿಂದ ಕವಿ ಆಡಿಸುತ್ತಾನೆ. ಸಂದರ್ಭ ಹೀಗಿದೆ. ರಾಮಲಕ್ಷ್ಮಣರಿಗೆ ಪರಶುರಾಮ ಎದುರಾಗುತ್ತಾನೆ. ಲಕ್ಷ್ಮಣ ಮತ್ತು ಪರಶುರಾಮರ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ಗಂಭೀರವಾದಾಗ ರಾಮ ಮಧ್ಯ ಪ್ರವೇಶಿಸಿ ಪರಶುರಾಮನಿಗೆ ಸಮಾಧಾನ ಹೇಳುತ್ತಾನೆ.

ಪ್ರೀತಿಯಕ್ಕರೆಯ ನುಡಿಯ ನೀವಾಡದಿರೆ ಎಂತು ಒಲಿವರು ಹೊಸಯುಗದ ಬಾಲಕರು ಗೌರವ ಬಯಸುವವರು ಹರಕೆಯನು ಬೇಡುವವರು ನಮಮನ್ನಂತರದ ಸೂಕ್ಷ್ಮ ಭಾವಗಳ ಗಮನಿಸುತ್ತ ಕಾರ್ಯವೆಸಗಬೇಕು'' ಎಂಬ ಮಾತು ಯಾವತ್ತೂ ಎಲ್ಲರಿಗೂ ಸಲ್ಲುವ ಮಾತು. ''ಯುಗದೊಡನೆ ಬದಲಾಗಬೇಕು ಯುಗದೃಷ್ಟಿ, ಇದು ಅನಿವಾರ್ಯ'' ಎಂಬ ಮಾತು ಕವಿಯ ಸಮಕಾಲೀನ ಪ್ರಜ್ಞೆಗೆ ಮತ್ತಷ್ಟು ಪುಷ್ಟಿಯನ್ನು ನೀಡುತ್ತದೆ. ''ಸಂಯಮದಿ ನಡೆಯೋಣ ವಿಶ್ವವೇ ನಮಗೆ ಸಾಮ್ರಾಜ್ಯ'' ಎಂಬಲ್ಲಿ ಮೊಯಿಲಿ ಅವರ ವಿಶಾಲ ದೃಷ್ಟಿಕೋನ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ.. ಉನ್ನತ ಚಿಂತನವು ಜಾಗೃತವಿರಲಿ. ಬುದ್ಧಿಭಾವಗಳಿಗೆ, ಮನಸ್ಸಿಗೆ ಬೇಲಿಹಾಕಬಾರದೆಂಬ ವಿಚಾರವೂ ನಮಗಿಂದು ಪ್ರಸ್ತುತವಾದುದು. ಮೈಲಿ ಅವರ ವೈಚಾರಿಕತೆ ವೈಜ್ಞಾನಿಕ ಹಿನ್ನೆಲೆಯುಳ್ಳದ್ದು. ''ಕೃಷಿಯೆಲ್ಲ, ವಿಜ್ಞಾನ ವೈಭವದಿ ಮೆರೆಯಲಿ'' ಎಂದಿದ್ದಾರೆ. ಈ ಬದುಕು ಬಾಳುವುದಕ್ಕೆ; ಬಾಳು ಬೆಳಕಾಗಬೇಕು. ಈ ಬದುಕೇ ಒಂದು ಮಹಾಯಾನ. ಇಲ್ಲಿ ಹುಟ್ಟಿ ಬಂದವರೆಲ್ಲ ಅವರವರ ಪಾಲಿನ ಕರ್ತವ್ಯವನ್ನು ಮಾಡಲೇಬೇಕು. 'ಬಂದ ಭಾಗ್ಯವನ್ನೆಲ್ಲ ಬಂದಂತೆ ಉಣಬೇಕು. ಅರ್ಥವಿಲ್ಲದ ಆಚರಣೆಗೆಲ್ಲ ಮಣೆ ಹಾಕಬಾರದು.

''ಶ್ರಾದ್ಧಾವೆಂಬುದೇನೊ ಸತ್ತವನು ಉಣ್ಣುವನೆ
ಜಾಣರಾರೋ ಬಹರು ಉಂಡುಂಡು ಪೋಗುವರು
ದಾನ ದಕ್ಷಿಣೆಯೆನುತ ಧನವಗಳಿಸಲದುವೆ
ದಾರಿಯಾಗಿಹುದು''

ಎತ್ತುತ್ತ ಪುರೋಹಿತಶಾಹಿ ಪ್ರವೃತ್ತಿಯನ್ನು ತರಾಟೆಗೆ ತೆಗೆದುಕೊಂಡಿವೆ. ನಮ್ಮ ಧರ್ಮ, ಅಲ್ಲಿನ ಆಚರಣೆಗಳು ಮನುಷ್ಯನನ್ನು ಸುಲಿಯುವ ದಂಧೆಗಿಳಿದಿರುವುದನ್ನು ಕವಿ ಪ್ರತಿಭಟಿಸಿದ್ದಾರೆ. ಗೊಡ್ಡು ಪುರಾಣಗಳ ಮಾತಿಗೆ ಮರುಳಾಗದೆ ಪ್ರತಿಯೊಬ್ಬರೂ ವಿಕಾಸಪಥವನ್ನು ಅರಿತು ಕೊಳ್ಳಬೇಕು. ''ಧರ್ಮನೆನ್ನುತ ಜನರು ಮೌಢ್ಯದಲಿ ಮುಳುಗಿಹರು, ಅದನೆಲ್ಲ ಕಿತ್ತೊಗೆದು ಸಮಾನತಾಕ್ಷೇತ್ರದಲಿ ಕ್ರಾಂತಿ ಬೀಜದ ಬಿತ್ತಿ

TRIMURTI
JEWELLERS
GOLD AND DIAMOND
ORNAMENTS

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.) Mumbai-19.

Phone : 402 34 85

ಅನುಭವದ ಸೀಮಾರೇಖೆ ವಿಸ್ತರಿಸುವುದ ತಡೆಯಲಾಗದು'' ಎಂಬ ರಾಮನ ಮಾತು ಪ್ರಗತಿಪರ ಧೋರಣೆಯನ್ನು ಒಳಗೊಂಡದ್ದು.

''ಪರಿವರ್ತನೆಗೆ ಎಡೆ ಇರಬೇಕು ಧರ್ಮದಲಿ
ಅಂತಿಲ್ಲದಿರೆ ಜಡವಾಗಿ ನವಧರ್ಮದುದಯಕ್ಕೆ
ಅದುವೆ ಕಾರಣವಹುದು''

ಎಂಬ ಸತ್ಯವನ್ನು ಕವಿ ಕಂಡುಕೊಂಡಿದ್ದಾರೆ. ಮಹಾಕಾವ್ಯದ ವಿಶಾಲ ಚೌಕಟ್ಟಿನಲಿ ಬದುಕಿನ ಬೇರೆ ಬೇರೆ ಸಂದರ್ಭ ಹಾಗೂ ಸವಾಲುಗಳ ನಡುವೆ ನಾನಾ ಪ್ರಶ್ನೆಗಳನ್ನು ಎತ್ತಿ ಅವುಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮೊಯಿಲಿ ಅವರು ಮಾಡಿದ್ದಾರೆ. ಮೊಯಿಲಿ ಅವರು ಶ್ರೀ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯ ಪುರಾಣ ನೂತನವಾದುದು. ಸಮಕಾಲೀನ ಧೋರಣೆಗಳನ್ನು ಗಮನದಲ್ಲಿಟ್ಟುಕೊಂಡು ಮಾನವೀಯ ಮೌಲ್ಯಗಳಿಗೆ ಧಕ್ಕೆ ಬರದಂತೆ ಪುರಾಣಗಳ ಮರುಸೃಷ್ಟಿಗೊಳಿಸಿದ್ದಾರೆ. ಹಳೆ ಬೇರು ಹೊಸ ಚಿಗುರು ಎಂಬ ಸಮನ್ವಯ ದೃಷ್ಟಿಕೋನವೂ ಇಲ್ಲಿದೆ. ವರ್ತಮಾನದ ರಾಜಕೀಯ ಸಾಮಾಜಿಕ ಆರ್ಥಿಕ ಧಾರ್ಮಿಕ ಮೊದಲಾದ ನೆಲೆಗಳನ್ನು ವ್ಯಾಪಿಸಿಕೊಂಡಿರುವ ಸಂಕೀರ್ಣ ಯುಗ ಧರ್ಮದ ದನಿಯಾಗಿ ಈ ಮಹಾಕಾವ್ಯ ಮೈಪಡೆದುಕೊಂಡಿದೆ. ಎಲ್ಲ ಕಾಲಕ್ಕೂ ಹೊಸತು ಹೊಸತು ಎನಿಸಿಕೊಳ್ಳಬಲ್ಲ ಅರ್ಥ, ಭಾವ, ಮೌಲ್ಯಗಳಿಗೆ ಪ್ರತೀಕವಾದ ಅಭಿವ್ಯಕ್ತಿ ಕ್ರಮವಿಲ್ಲಿ ನೆಲೆ ಪಡೆದುಕೊಂಡಿದೆ. ಬದುಕಿನ ದಟ್ಟ ಅನುಭವಗಳನ್ನು ಸಮಕಾಲೀನಗೊಳಿಸಿ ಅರ್ಥೈಸುವ ಪ್ರಯತ್ನವನ್ನು ಕವಿ ಇಲ್ಲಿ ಮಾಡಿದ್ದಾರೆ. ಹೀಗಾಗಿ ರಾಮ ಲಕ್ಷ್ಮಣ ಸೀತೆ, ಅಹಲ್ಯೆ ಮೊದಲಾದ ಪಾತ್ರಗಳು ಪುರಾಣದ ಸವೆದ ಸಿದ್ಧ ಪಡಿಯಚ್ಚುಗಳಲ್ಲ. ಅವರೆಲ್ಲ ನಮ್ಮ ನಡುವಿನ ಶ್ರೇಷ್ಠ ಚಿಂತಕರಾಗಿ, ಜ್ಞಾನಿಗಳಾಗಿ, ನ್ಯಾಯಮೂರ್ತಿಗಳಾಗಿ, ಕರ್ತವ್ಯ ಪಾರಾಯಣರಾಗಿ, ಅನ್ಯಾಯವನ್ನು ಪ್ರತಿಭಟಿಸುವ ದಿಟ್ಟ ಹೋರಾಟಗಾರರಾಗಿ, ನಮ್ಮ ಸಮಕಾಲೀನ ವ್ಯಕ್ತಿಗಳಾಗಿ ಕಂಗೊಳಿಸಿದ್ದಾರೆ. ಅವರು ಗಾಂಧಿ, ನೆಹರು, ಅಂಬೇಡ್ಕರ್‌ರಂತೆ ಪರಿವರ್ತನೆಯ ಹರಿಕಾರರೂ ಹೌದು.

ಮೊಯಿಲಿ ಅವರು ಈ ಮಹಾಕಾವ್ಯದಲ್ಲಿ ತಮ್ಮ ವೈಚಾರಿಕತೆಯ ಮೂಲಕ ಲೋಕದೊಂದಿಗೆ ಮಾತಿನ ಸಂಬಂಧ ಕಲ್ಪಿಸಿದ್ದಾರೆ. ಆ ಮಾತು ಏಕಕಾಲಕ್ಕೆ ಹಳೆಯದೂ ಹೊಸದೂ ಆಗಿ ಎಲ್ಲ ಕಾಲಗಳಿಗೂ ಸಮಾನವಾಗಿ ಸಲ್ಲುತ್ತದೆ. ಸಂಸ್ಕೃತಿ ಭೂತದ ನೆಲೆ ಮಾತ್ರವಲ್ಲದೆ ವರ್ತಮಾನದ ವ್ಯಾಖ್ಯಾನವೂ ಆಗಬಲ್ಲದು.

ಬದುಕಿನ ಹೋರಾಟ ಏರಾಟ ತುಳಿದಾಟ
ಎಳೆದಾಟದಲಿ ಸಿಲುಕಿಹನು ಮಾನವನು. ಹಬ್ಬುತಿದೆ
ಘೋರ ಮರುಭೂಮಿ ಅವನ ಹೃದಯದಲಿ, ಹಸಿರಿಲ್ಲ
ತಂಪಿಲ್ಲ, ಬರಿದಾಗುತಿದೆ ಅವನಂತರಂಗ.
ಬಾಂಧವ್ಯ ಬೆಸುಗೆಯದು ಮುರಿದು ಚೂರಾಗುತಿದೆ
ರಸ ಅರ್ಥ ಭಾವಗಳ ಸವಿಯುವಾ ಸಾಮರ್ಥ್ಯ
ಕುಗ್ಗುತಿದೆ. ನಿರುತ್ಸಾಹ ಔದಾಸೀನ್ಯ ಹೆತ್ತುತಿದೆ
ಮನವು ಕದಡಿರಲಾಗಿ ಸ್ನೇಹ ಕುಡಿ ಕರಟುತಿದೆ''

ಆಧುನಿಕ ಮನುಷ್ಯ ಬರಡಾಗುತ್ತಿದ್ದಾನೆ. ಘೋರ ಮರುಭೂಮಿ ಅವನ ಹೃದಯವಾಗುತ್ತಿದೆ. ಬಂಜರುಭೂಮಿ ಕೃತಿಯಲ್ಲಿ ಕವಿ ಎಲಿಯಟ್ ಹೇಳುವ ಅನಾಥ ಪ್ರಜ್ಞೆಯ ವಿಚಾರವೂ ಈ ಮಹಾಕಾವ್ಯದಲ್ಲಿ ಮತ್ತೆ ಮತ್ತೆ ಚರ್ಚೆಗೆ ಗ್ರಾಸವಾಗಿದೆ. 'ಮಾನವತೆ ಹೆಮ್ಮರಕೆ ಗೆದ್ದಲಂಟಿಹುದಲಾ!' ಎಂದು ಕವಿ ಜೀವಿ ಮಮ್ಮಲ ಮರುಗಿದೆ. ಶತಶತಮಾನಗಳಿಂದ ವ್ಯವಸ್ಥೆಯ ದೌರ್ಜನ್ಯಕ್ಕೆ ಬಲಿಯಾದ, ನರಕ ಸದೃಶ ಜೀವನ ನಡೆಸಿದ ಜನ ಸಾಮಾನ್ಯರ ಕುರಿತೂ; ಅವರ ದೈನಂದಿನ ಜೀವನಶ್ರಮವನ್ನು ಸಮಕಾಲೀನ ನೆಲೆಗೆ ತಂದು ಕವಿ ಇಲ್ಲಿ ಮಾತನಾಡಿದ್ದಾರೆ 'ಮಾನವತಾವಾದಿ' ಮೊಯಿಲಿ ಅವರು ನಮಗಿಲ್ಲಿ ಕಾಣಸಿಗುತ್ತಾರೆ. ಮೊಯಿಲಿ ಅವರ ಈ ಮಹಾಕಾವ್ಯದ ಭಾಷೆ, ಶೈಲಿಯೂ ಸಮಕಾಲೀನ ಪ್ರಜ್ಞೆಗೆ ಹತ್ತಿರವಾದುದು. ಕವಿ ಎತ್ತಿ ಹಿಡಿದಿರುವ ಆಡುಮಾತಿನ ಲಯ ಲಲಿತ ಮನೋಹರವಾದುದು. ಈ ಯುಗ ಮಾನದ ಅನೇಕ ಪದಪುಂಜಗಳ ಬಳಕೆಯನ್ನು ಕವಿ ಇಲ್ಲಿ ಸೊಗಸಾಗಿ ತಂದಿದ್ದಾರೆ. ಭಯೋತ್ಪಾದಕರ ಧಾಳಿ, ಸೈನ್ಯ ಶಿಬಿರ, ಸಂಕಟಾವಳಿ, ಕಂಗಾಲು, ಜನವಿರೋಧಿ, ವಾಮಮಾರ್ಗ, ಜನಜಾಗೃತಿ, ಮೂಲ ನಿವಾಸಿ, ಪಿತೂರಿ, ಬಂಡಾಯ, ನೂತನ ಸಂಪುಟ, ಕೂಲಿಕಾರರು, ಕ್ರಾಂತಿವೀರ, ತಡೆರಹಿತ, ಒರಲು, ನರಬಿಳ್ಳೆ, ಕಾರ್ಯಾಗಾರ, ಪಾರದರ್ಶಕ ಆಡಳಿತ, ಸತ್ಯಾಗ್ರಹ, ಸ್ಥಿತ್ಯಂತರ, ಹೀಗೆ ದೈನಂದಿನ ನಮ್ಮ ವ್ಯಾವಹಾರಿಕ ಪದಗಳೂ ಸಶಕ್ತವಾಗಿ ಸೇರ್ಪಡೆಗೊಂಡಿವೆ. ಹೀಗೆ ಮೊಯಿಲಿ ಅವರು ಪ್ರಸ್ತುತ ಮಹಾಕಾವ್ಯದಲ್ಲಿ ತಮ್ಮ ಕಾಲದ, ಈ ಯುಗದ ಮನೋಧರ್ಮವನ್ನು, ಜನಮನೋಧರ್ಮವನ್ನು, ಸಮಕಾಲೀನ ಪ್ರಜ್ಞೆಯನ್ನು ಸಮರ್ಥವಾಗಿ ತುಂಬಿಕೊಟ್ಟಿದ್ದಾರೆ. ಹೀಗಾಗಿ ಕನ್ನಡ ಮಹಾಕಾವ್ಯ ಪರಂಪರೆಯಲ್ಲಿ ಮೊಯಿಲಿ ಅವರ ಶ್ರೀ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯಕ್ಕೆ ವಿಶಿಷ್ಟವಾದ ಸ್ಥಾನಮಾನವಿದೆ.

-- ಡಾ. ಜಿ.ಎನ್. ಉಪಾಧ್ಯ


## MATRIMONIAL

Alliance invited for Kannada Smartha Brahmin girl 26 years, 5-4", Lohitasa gotra, Kanya Rashi, Uttara Nakshatra; B.Sc , P.G.D. Computer programmer from St. Xavier Mumbai Smart, good looking

Requirement - Good looking well qualified and well settled boy.

Contact : Shri Vidya shankar

Phone no. 022 524 17 32 e-mail : varble@yahoo.com or Nesaru Box No. 6

***

Alliance invited for Kannada Madhwa boy gautama gothra age 28yrs. height 6ft. M.B.A.( Finance-from Mumbai Unversity )working in a multinational concern based in Mumbai with good salary, very fair and handsome. Girl should be more than B.com. i.e. Post graduate- M.B.A. preferably working in Mumbai.very fair beautiful, age 24 - 26, ht. 5-4 "to 5-6" . Reply with bio-data horoscope latest photo( in standing position Post card size)

Contact : Shri Vedavyasa Rao Phone no. 557 29 45 or Nesaru Box No. 7

***

Alliance invited for Smartha Brahmin ( Hoysala Karnataka ) girl Miss. Rashmi Bhardwaj of 23 yrs. B.com. completed DISM course from Aptech. Completed post graduate in Human resourees Management currently working as Assistant Manager for Pentasoft Technologies, Mumbai Gothra Bharadwaja, Nakshtra Anuradha Vruschika Rashi Requirements: Well qualified and well settled preferably from Mumbai or Bangalore.

Contact : 022-633 06 74 or Nesaru Box No. 8

# ವೀರಪ್ಪ ಮೊಯ್ಲಿಯವರ
# 'ಶ್ರೀರಾಮಾಯಣ ಮಹಾನ್ವೇಷಣಂ' ಮಹಾಕಾವ್ಯದ ಭಾಷೆ ಮತ್ತು ಶೈಲಿ

✍ ಸುನೀತಾ ಶೆಟ್ಟಿ, ಮುಂಬಯಿ

ಕಳೆದ ಶತಮಾನದ ಮೇರುಕವಿ ಕೆ.ವಿ. ಪುಟ್ಟಪ್ಪನವರು ತನ್ನ ಮಹಾಕಾವ್ಯದಲ್ಲಿ ಹೇಳಿದ ನಮನವೆ ''ಯುಗಶಕ್ತಿಯಲ್ತೆ'' ಎಂಬ ಮಾತು ಸರ್ವಕಾಲಿಕವೆಂಬುದರ ಸತ್ಯ, ಈ ಶತಮಾನದ ಆದಿಯಲ್ಲಿ ಹುಟ್ಟಿದ ಮಹಾಕಾವ್ಯವೊಂದರ ಅವಲೋಕದಿಂದ ಸುಸ್ಪಷ್ಟವಾಗುತ್ತದೆ. ವೀರಪ್ಪ ಮೊಯ್ಲಿಯವರ 'ಶ್ರೀರಾಮಾಯಣ ಮಹಾನ್ವೇಷಣಂ' ಕಾವ್ಯದ ಮೊದಲ ಸಂಪುಟವೆ ಇಂಥ ಜನಮನದ ಶಕ್ತಿಯನ್ನು ಬಿಂಬಿಸುವ, ಉತ್ತಮ ಸಾಹಿತ್ಯ ಪ್ರಕಾರವಾಗಿ ಓದುಗರ ಕೈ ಸೇರಿದೆ, ಕನ್ನಡ ಸಾರಸ್ವತ ಪ್ರಪಂಚ ಅದನ್ನು ಮೆಚ್ಚಿಗೆಯ ಮೂಲಕ ಸ್ವಾಗತಿಸಿದೆ. ಇಲ್ಲಿಯ ಅನ್ವೇಷಣೆಯೆಂದರೆ ಚಿರಂತನ ಸತ್ಯದ ಹುಡುಕಾಟ, ಮಾನವತೆಯ ಕೊಂಡಾಟ. ಇಂಥ ಅಲೌಕಿಕ ಸತ್ಯವನ್ನು ಮೊಯ್ಲಿಯವರು 'ಆಂತರಿಕ ದರ್ಶನ' ವೆಂದಿದ್ದಾರೆ. 'ಚಿರಂತನ ಸತ್ಯಗಳ ಚಿನ್ಮಯ ಪ್ರತಿಮೆ'ಯೆಂದು ತನ್ನ ಕಾವ್ಯದ ಮಹತ್ತನ್ನು ವಿಶದೀಕರಿಸಿದ್ದಾರೆ. 'ಸಮಭಾವ, ಸಮಬಾಳ್ವೆ'ಯ ಕನಸಿನ ಪ್ರತೀಕವೆನಿಸುವ ಈ ಕಾವ್ಯವು ಈ ಶತಮಾನದ ಮಹತ್ವದ ಕೊಡುಗೆ ಎನಿಸಬಲ್ಲುದು.

'ಶ್ರೀರಾಮಾಯಣ ಮಹಾನ್ವೇಷಣಂ'- ಹೆಸರೇ ಸೂಚಿಸುವಂತೆ ರಾಮಾಯಣದಲ್ಲಿ ಅಡಕವಾಗಿರುವ ಶಾಶ್ವತ ಮೌಲ್ಯಗಳ ಅನ್ವೇಷಣೆ ಇಲ್ಲಿ ಆರಂಭಗೊಂಡಿದೆ. ಕಥೆಗಳ ಹಂದರದಲ್ಲಿ ಸನ್ನಿವೇಶಗಳ ನಿರ್ಮಾಣದಲ್ಲಿ ಕೈಗೊಂಡಿರುವ ಒಂದು ಬಗೆಯ ಶೋಧವು ಕವಿಯನ್ನು ನಿತ್ಯ ಯಾತ್ರಿಕನ ಕಟ್ಟೆಚ್ಚರದ ಪಯಣದಂತೆ ರೂಪಿಸಿದೆ. ಆದ್ದರಿಂದ ಈ ಪ್ರಸ್ಥಾನದಲ್ಲಿ ಭಾಷೆಗೆ ಮಹತ್ವ ಸ್ಥಾನ. ಭಾಷೆಯಿಂದ ಶೈಲಿ, ವಸ್ತುವನ್ನು ಹೊಂದಿಕೊಂಡು ಬದಲಾಗುವ ಶೈಲಿಯಿಂದಾಗಿ ಭಾಷೆಗೂ ಪರಿವರ್ತನ ಶೀಲ ಗುಣ ಒದಗಿ ಬರುತ್ತದೆ. ಎಂದರೆ, ಪ್ರಪಂಚದ ವ್ಯವಹಾರಗಳನ್ನು ಕಾಲಕಾಲಕ್ಕೆ ನಿರ್ದೇಶಿಸುವ ಕೆಲಸ ಭಾಷೆಯದು; ಆದ್ದರಿಂದ ಇದು ಭಾಷೆಯ ಜೀವಂತಿಕೆಯ ಲಕ್ಷಣವೂ ಹೌದು.

ಭಾಷೆಯೆಂಬುದು ಹೆಚ್ಚಾಗಿ ಕೃತಿಕಾರನು ವಾಸಿಸುವ ಪರಿಸರಕ್ಕೆ ಸಂಬಂಧಿಸಿದ್ದು. ಆದರೆ ಪ್ರಮಾಣ ಭಾಷೆ ಎಂಬುದೊಂದು ಸಾಹಿತ್ಯದಲ್ಲಿ ಇದೆ. ಎಲ್ಲರಿಗೂ ಒಪ್ಪಿತವಾಗುವ ಮಾತಿನ ರೀತಿಯೇ ಇದು' ತಿ.ನಂ. ಶ್ರೀಯವರು ಕಾವ್ಯದ ಹೊಸ ಮಟ್ಟುಗಳನ್ನು ಹೇಳುವಾಗ ಆಧುನಿಕ ಯುಗವನ್ನು 'ಹೊಸ ಪ್ರಯೋಗಗಳ ಕಾಲ ' ಎಂದು ಕರೆದರು. ಅವರು ಹೇಳುವಂತೆ ಸಹೃದಯನು ಒಂದು ಕಿವಿಯನ್ನು ಭಾಷೆಗೂ ಇನ್ನೊಂದು ಕಿವಿಯನ್ನು ಕಾವ್ಯದ ಗತಿಗೂ ಕೊಡಬೇಕು. ಇದರರ್ಥ ಭಾಷೆ ಪ್ರಧಾನ; ಕಾವ್ಯದ ಗತಿಯೆಂದರೆ ಅದಕ್ಕೆ ತೊಡಿಸುವ ಅಲಂಕಾರ ಕಣ್ಣುಗಳಿದ್ದು ಕಿವಿಕಿವುಡಾದರೇನು ಪ್ರಯೋಜನ?

ಮೊಯ್ಲಿಯವರು ಬರೆದ ಮಹಾಕಾವ್ಯದ ಭಾಷೆ ಹೊಸಗನ್ನಡವೇ ; ಅದು ಸರಳವೆಂದರೂ ಹಾಗೆ ಕಟ್ಟುನಿಟ್ಟಾಗಿ ನಿರ್ಣಯಿಸಲಾದ ಆಂತರಿಕ ಸೌಂದರ್ಯ ಇಲ್ಲಿಯ ಭಾಷೆಗಿದೆ. ನಯಸೇನನ 'ಧರ್ಮಾಮೃತ'ದ ಕಾವ್ಯ ಭಾಷೆಯನ್ನು ವಿದ್ವಾಂಸರು ''ಸಂಸ್ಕೃತವೆನಿಸಿಕೊಳ್ಳುವ ಸಂಸ್ಕೃತ'' ಎಂದಿದ್ದಾರೆ. ಭಾಷೆಗೂ ಒಂದು ಸಂಸ್ಕೃತಿ ಉಂಟು. ಭಾಷೆಯನ್ನು ಸಿಕ್ಕಾಪಟ್ಟೆ ಬಳಸಿಕೊಂಡಾಗ, ಅದು ಸಂಸ್ಕಾರವಿಲ್ಲದ್ದು ಎಂಬ ಅಪವಾದಕ್ಕೆ ಗುರಿಯಾಗುತ್ತದೆ. ಇಲ್ಲಿ ರಾಮಾಯಣದಲ್ಲಿ ಇರುವವರೆಲ್ಲ ಪುರಾಣಪುರುಷರು. ಆದ್ದರಿಂದ ಭಾಷೆ ಎಷ್ಟೇ ಸರಳವಾದರೂ ಅದರಲ್ಲಿ ಸಹಜತೆಯಷ್ಟೆ ಗಾಂಭೀರ್ಯವೂ ಬೇಕು; ಗೂಢಾರ್ಥವನ್ನು ಒಳಗೊಂಡು ಧ್ವನಿ ಸಾಮರ್ಥ್ಯದಿಂದ ಪ್ರಬುದ್ಧವೆನಿಸಬೇಕು.

ಮೊಯ್ಲಿಯವರು ಇದನ್ನು ಸಾಧಿಸಿಕೊಂಡಂತಿದೆ.

ಉದಾ : ದಶರಥನು ತಾನು ನಿಪುತ್ರಕ ನಾದೆನಲ್ಲ, ಎಂಬ ಕೊರಗನ್ನು ವಾಮದೇವ, ವಶಿಷ್ಠಾದಿ ಗುರುಗಳಿಗೆ ಹೇಳಿಕೊಳ್ಳುವ ಸಂದರ್ಭ :-

''ಗುರುವರರೆ ಎನ್ನೆದೆಯ ಸಿರಿಯ ಹೊನ್ನಿನ ಕಲಶದ
ಬಿರುಕು ಬಿಟ್ಟಿಹುದು, ಎನ್ನ, ಎನ್ನ ಜೀವನದಮೃತ
ಸೋರಿ ಹೋಗುತ್ತಿಹುದು, ಬರಿದಾಹುದು ಒಡಲು...
ದಿಕ್ಕುದೆಸೆ ಕಾಣದೆಯೆ ದಗ್ಧವಾಯಿತು ಹೃದಯ
ಬಂದಳಿಕೆ ಆಮರಿರುವ ಆಮ್ರವೃಕ್ಷದ ತೆರದಿ
ನಿರ್ವಿಣ್ಣನಾಗಿಹೆನು''....

(ಪ್ರಸ್ಥಾನ.೩ ಪು. ೩೮.೩೯)

ಸರಳ ಭಾಷೆಯಲ್ಲಿ ಸನ್ನಿವೇಶದ ತೀವ್ರತೆಯನ್ನು ಪ್ರಕಟಿಸುವ ಸಂದರ್ಭ ಉದಾ : ದಶರಥನು,

''ಅರ್ಧ ಸತ್ತವನಂತೆ ಅರ್ಧ ಜೀವಿತನಂತೆ
ಎನಿಸಬಾರದ ಸಂಕಟದಿ ಹಲುಬಿ ಹೊರಳಿದನು''

''ಹೊಲದ ತುರುವಿಂಡಿಂಗೆ
ಸೋವರಿತು ಬಾಯ್ಬಿರೆದು ಹೊಂಚಿನಲಿ ಜಾರುತಿಹ
ಹೆಬ್ಬುಲಿಯಂತಾದೆಯಾ''....

(ಪ್ರಸ್ಥಾನ.೩೧ ಪು. ೩೦೪)

ಎಂದು ದಶರಥನು ಪರಿತಾಪದಿಂದ ಕೈಕೆಯನ್ನು ನಿಂದಿಸುವ ಸಂದರ್ಭಗಳು, ವ್ಯಥಿತಗೊಳ್ಳುವ ದುಃಖದ ಸನ್ನಿವೇಶಗಳು ಅಂತೆಯೇ ದೇಸಿಯನ್ನು ಪೊಕ್ಕು ಮಾರ್ಗದಲ್ಲಿ ಕ್ರಮಿಸುವ ಸಾಲುಗಳು, ಭಾಷೆಯನ್ನು ಹದಗೊಳಿಸಿವೆ; ಸುಂದರಗೊಳಿಸಿವೆ. ಭಾಷೆಯ ತೊಡವುಗಳಾದ ನುಡಿಕಟ್ಟುಗಳೇ ಇನ್ನೊಂದು ಶೋಭೆ...

ಉದಾ : ಕಾಮಧೇನುವ ಕರೆದ ಪಾಲಿಂಗೆ
ಬಚ್ಚಲ ನೀರೆರೆದು ಕಾಸಿಕುಡಿವಂತಾಯ್ತು
ಹೇ ವಿಧಿಯೇ !'' (ಪು. ೩೦೩)

ಸರಳತೆ ಎಲ್ಲರ ಕೈಪಿಡಿಯಾದರೆ, ಧ್ವನ್ಯಾರ್ಥದಿಂದ ಕೂಡಿದ ಇಲ್ಲಿಯ ಉಪಮೆಯೊಂದು ವ್ಯಕ್ತಿಚಿತ್ರಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಕಾವ್ಯದಲ್ಲಿ ದೇಸಿಯ ಸುಖವನ್ನು ಅನುಭವಿಸಬೇಕಾದರೆ ತುಳುನಾಡಿನ ಭಾಷೆಗೆ ಬರಬೇಕು. ಕನ್ನಡ ರತ್ನಾಕರವರ್ಣಿ ಮುದ್ದಣ, ಗೋವಿಂದ ಪೈಗಳು, ಮುಳಿಯ ತಿಮ್ಮಪ್ಪಯ್ಯ, ಸೇಡಿಯಾಪು ಕೃಷ್ಣ ಭಟ್ಟ, ಶಿವರಾಮ ಕಾರಂತ, ಹೀಗೆ ತುಳುನಾಡಿನ ಮಣ್ಣು ಕಂಪನ್ನು ಹರಡಿದ ಸಾಹಿತಿಗಳ ದೊಡ್ಡದೊಂದು ಪಟ್ಟಿಯೇ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿದೆ. ಪೇಜಾವರ ಸದಾಶಿವರಾಯರು ದೂರದ ಇಟಲಿಯಲ್ಲಿದ್ದು ತುಳುವರ ಆಟಿಯ ಹುಣ್ಣಿಮೆ, ಆಟಿಕೊಡಂಜಿ, ಸೋಣದ ಹೂಗಳನ್ನು ತನ್ನ ಕವಿತೆಯಲ್ಲಿ ಹೆಣೆದಿದ್ದಾರೆ. ಇಂಥ ಗಟ್ಟಿ ಪರಂಪರೆಯ ಕೂಸು ಮೊಯ್ಲಿಯವರು; ಮಣ್ಣಿನ ಮೈಮೆ ಅವರನ್ನು ಬಿಟ್ಟೀತೇ?

ಅಯೋಧ್ಯೆಯಲ್ಲಿ ಪುತ್ರಕಾಮೇಷ್ಟಿಯಾಗ ಒಂದೆಡೆಯಾದರೆ ಜನಪದರು ರಾಜನಿಗೆ ಸಂತಾನ ಪ್ರಾಪ್ತಿಯಾಗುವಂತೆ 'ನಾಗಮಂಡಲ'ವನ್ನು ನೆರವೇರಿಸುತ್ತಾರೆ. ಫಲವಂತಿಕೆಯ ಸಂಕೇತವೆನಿಸುವ 'ಕೆಡ್ಡಸ' ಹಬ್ಬವನ್ನು ಆಚರಿಸುತ್ತಾರೆ. ಹೊಸ ಫಸಲನ್ನು ಮನೆತುಂಬಿಸಿಕೊಳ್ಳುವಾಗಿನ 'ಹೊಲಿ ಹೊಲಿ ಹೊಲಿಯೋ ' (ಪೊಲಿ, ಪೊಲಿ) ಧ್ವನಿ ಎಲ್ಲೆಡೆ ಕೇಳಿಸುತ್ತದೆ. ಇವೆಲ್ಲ ತುಳುವರ ವಿಶಿಷ್ಟ ಆಚರಣೆಗಳು. ಇಂಥ ದೇಸಿ, ಭಾಷೆಯ ಚೆಲುವನ್ನು ಇಮ್ಮಡಿಗೊಳಿಸುವುದಲ್ಲದೆ ಪ್ರಾದೇಶಿಕತೆಯ ಮೆರುಗನ್ನು ನೀಡಿ ಕೃತಿಕಾರನ ಪ್ರತ್ಯೇಕತೆಯನ್ನು ಸಾರುತ್ತದೆ.

ವರ್ಣನೆಯಲ್ಲೂ ದೇಸಿ ಅಲ್ಲಲ್ಲಿ ಎಡೆಯಾಡುತ್ತದೆ. ಉದಾ: ರಾಮ ಪಟ್ಟಾಭಿಷೇಕದ ಭೂರಿ ಸಂಭ್ರಮ, ಹಾಗೂ ಪೂರ್ವ ಸಿದ್ಧತೆಯಲ್ಲಿ ಯಕ್ಷಗಾನದ ಮೇಳವಿದೆ; ಚೆಂಡೆಯ ಬಿಳಿ ದನಿಯಿದೆ, ಚಿತ್ರಕೂಟದಲ್ಲಿ ಗೇರು ಮರವಿದೆ. ಇವೆಲ್ಲ ಕವಿಯ

ಹುಟ್ಟೂರಿನ ನೆನಪುಗಳು. ಕಾವ್ಯದ ಭಾಷೆಯ ಕಣಜದಲ್ಲಿ ಇವುಗಳಿಗೂ ಸ್ಥಾನವುಂಟು. ತುಳು ಭಾಷಿಕರೆಲ್ಲದವರೂ ಮೆಲಬಹುದಾದ, ಸವಿಯುಣ್ಣ ಬಹುದಾದ ಪರ್ಬದ 'ಪನಿಯಾರ'ದಂತೆ ಇವು ಕಂಗೋಳಿಸುತ್ತದೆ. ನಾವು ಮೆಚ್ಚಬೇಕಾದುದು ಇಲ್ಲಿಯ ಸಾಂದರ್ಭಿಕತೆಯನ್ನು ರಾಜಕೀಯದ್ದೆ ಆದ ಭಾಷೆಗೂ ಇಲ್ಲಿ ಸ್ಥಾನ ಉಂಟು...

''ಅಧಿಕಾರ ಕಾನೂನು ರಾಷ್ಟ್ರ ಶೀಲಗಳೆಲ್ಲ
ಸತ್ಯ ಪೀಠದ ಮುಂದೆ ಕರಗಿ ಕುಳಿತಿರಲಾಗಿ
ರಾಷ್ಟ್ರ ನವನದ ಮೇಲೆ ಸತ್ಯವನು ಬಲಿಕೊಡದೆ
ಸಾಗಿಹುದು ಎನ್ನೀ ಕವಿಯಾತ್ರೆಯಿದು''

ಎಂಬೀ ಸಾಲುಗಳು ಓರ್ವ ರಾಜಕಾರಮಿಯು ಕವಿಯೂ ಆಗಿದ್ದು ಸತ್ಯವನ್ನು ಹೆಗಲಿಗೇರಿಸಿ ತೂಕದಲ್ಲಿ ನಡೆಯುವ ಛಲಗಾರಿಕೆಯನ್ನು ತೆರೆದಿಡುತ್ತದೆ; ಕಾವ್ಯದ ರಸಯಾತ್ರೆಯಲ್ಲಿ, ಕಲ್ಪನೆಗಳ ದೊಂದಿ ಬೆಳಕಿನಲ್ಲಿ ಶಾಶ್ವತ ಸತ್ಯದ ಮೈಲಿಗಲ್ಲುಗಳಿವೆ. ಕ್ರಮಿಸುವ ದಾರಿಯ ಶಾಸನ ಕಂಬಗಳೇ ಅವು. ಇಲ್ಲಿ ನಡೆಯುವುದು ಹೊಸಕಾಲದ ಪಯಣ; ಕವಿಯೇ ಹೇಳುವಂತೆ 'ನವಧರ್ಮ, 'ನವ್ಯ ವಿಚಾರ, ನವಚಿಂತನೆ' - ಇವೇ ಪಥಿಕನ ಬೆಳಕು'

ಇನ್ನು, ಶೈಲಿಯ ಬಗೆಗೆ ಎರಡು ಮಾತು....

ಶೈಲಿಗೆ ನಾಲ್ಕು ಅಂಗಗಳು... ಉತ್ತಮ ಬರವಣಿಗೆ, ಅಲಂಕಾರ, ಪ್ರತ್ಯೇಕತೆ ಹಾಗೂ ಪರಿವರ್ತನ ಶೀಲತೆ. ಇದನ್ನು ವಿ.ಸೀ.ಯವರು 'F'- ಎಂಬ ಒಂದು ಅಕ್ಷರದಿಂದ ಹೀಗೆ ವಿಸ್ತರಿಸುತ್ತಾರೆ. - Full, Free, Franke and Fearlessness; ನಿರ್ಭೀತಿಯಿಂದ ಬರೆಯುವ ನಿರ್ದಿಷ್ಟ ವಿಚಾರಗಳಲ್ಲಿ ಸ್ವಾತಂತ್ರ್ಯ ಪರ ಧೋರಣೆಯಿದ್ದು ಅದು ಗಂಭೀರವೆನಿಸುವುದು ಶೈಲಿ. ಮುಖ್ಯ ಲಕ್ಷಣವೆಂದು ನಾವು ಇದನ್ನು ಅಭ್ಯಸಿಕೊಳ್ಳಬಹುದು. ಪಾಶ್ಚಾತ್ಯರಲ್ಲಿ ಲೀಚ್ ಎಂಬವನು ಇನ್ನೊಂದು ಬಗೆಯ ಶೈಲಿಯನ್ನೂ ಹೇಳುತ್ತಾನೆ. ಅದೇ 'Mind Style' 'The Writer slauts us to a particular mental set'' - ಲೇಖಕನು ಓದುಗನ ಮನಸ್ಸನ್ನು ಒಂದು ಸ್ಥಿತಿಗೆ ಒಯ್ಯುವ ಪ್ರಯತ್ನ ಮಾಡುತ್ತಾನೆ. ಅಲ್ಲಿ ಹೊಸತನವಿರುತ್ತದೆ; ಅದನ್ನು ಒಪ್ಪಿಕೊಳ್ಳುವ ಮನಸ್ಸುಗಳೂ ಕ್ರಮೇಣ ಸಿದ್ಧಗೊಳ್ಳುತ್ತವೆ. ಇದು ಹೆಚ್ಚು ಪರಿಣಾಮಕಾರಿ ಎನಿಸುವುದು ಪಾತ್ರಚಿತ್ರಣದಲ್ಲಿ.

ವಿಶ್ವಾಮಿತ್ರರೊಡಗೂಡಿದ ರಾಮಲಕ್ಷ್ಮಣರು ಗೌತಮನಆಶ್ರಮದ ಬಳಿಗೆ ಬಂದು, ಗುರುಮುಖೇನ ಅಹಲ್ಯೆಯ ಇರವನ್ನು ತಿಳಿದು ಕನಿಕರಿಸಿ ಮುಚ್ಚಿದ ಬಾಗಿಲನ್ನು ತಟ್ಟಿ 'ಹೇ ತಾಯೆ ತೆರೆಯ್ ಬಾಗಿಲನು' ಎನ್ನುವರು. ಜೀವಚ್ಛವದಂತಿದ್ದ ಕೊಂಡು ಕಾಯದ ಅಹಲ್ಯೆ, ರಾಮ ಲಕ್ಷ್ಮಣರನ್ನು ಕಂಡು ಬೆಂದಮನಸ್ಸಿನಿಂದ ಹೀಗನ್ನುತ್ತಾಳೆ.

''ಯುಗಗಳಂದದಿ ವರುಷಗಳ ಕಳೆದಿಹೆನು ಕಾದಿಹೆನು ದಿವ್ಯ ದರ್ಶನತೆ ಮೋಕ್ಷ ವಿಮೋಚನೆಯ ದ್ವಾರೋದ್ಘಾಟನೆಗೆ
ಜಡವಾಗಿ ಶಿಲೆಯಾಗಿ ಬಿದ್ದವಳು ಜಗದೊಳಗೆ
ನಾನೋರ್ವಳೇ ಅಲ್ಲ; ಸಕಲ ಆರ್ಯಾವರ್ತ ಜಡವಾಗಿಹುದು...''

(ಪ್ರಸ್ಥಾನ.೨೨ ಪು. ೧೯೯)

ಇಲ್ಲಿಯ ಅಹಲ್ಯೆ ಶಾಪಗ್ರಸ್ತಳಾಗಿ ಕಲ್ಲಾಗಿ ಬಿದ್ದವಳಲ್ಲ ; ನಾರೀ ಶೋಷಣೆಗೆ ಪ್ರತಿಭಟನಾ ಸ್ವರೂಪಿಯಾಗಿ, ಸರ್ವ ದೌರ್ಬಲ್ಯಗಳ, ದೀನರ ಮನೋಬಲದ ಪ್ರತೀಕವಾಗಿ ಶಿಲೆಯಂತೆ ನಿಂತವಳು. ಇಂಥದೊಂದು ಹೊಸಪರಿಕಲ್ಪನೆಗೆ ಓದುಗರು ಒಗ್ಗಿಕೊಳ್ಳುವಂತೆ ಸನ್ನಿವೇಶಗಳ ನಿರ್ಮಾಣ ನಡೆದಿದೆ.

''ಕಡಿಯದಿರು ಜೀವದ ಮರವ, ನೋವು ಪರಿಸರಕೆ'' - ಎಂದು ರಾಮನು ಲಕ್ಷ್ಮಣನಿಗೆ ಹೇಳುವ ನುಡಿಗಳಾಗಲಿ ''ಸಂಪದಮ ಲೋಕಕ್ಕೆ ಅರ್ಪಿತವೆ ಆಗುವೊಡೆ ಸಾರ್ಥಕವು'' - ಎಂದು ಸೀತೆಯ ಸಂದೇಹವನ್ನು ಪರಿಹರಿಸುವ ಪ್ರಕೃತಿ ಪ್ರೇಮವಾಗಲಿ, ಕವಿಯ ಅಂತರಂಗದ ಧ್ವನಿಗಳೇ ಆಗಿವೆ.

ಶೈಲಿಯಲ್ಲಿ ಮುಖ್ಯವಾದುದು ಅಲಂಕಾರ ಕವಿ, ಉಪಮಾಲೋಲನೆಂಬುದು ಕಾವ್ಯದುದ್ದಕ್ಕೂ ಸಿದ್ಧವಾಗುವ ಅಂಶ. ಅಲ್ಲಲ್ಲಿ ದೃಷ್ಟಾಂತವೂ ಚೆಲುವಿಕೆಗೆ ಒಪ್ಪವಿಟ್ಟಿದೆ.

''ಹೂವೊಂದು ಉದುರಿತ್ತು ರಾಮನೆತ್ತಿಯ ಮೇಲೆ

ಎಂಬಲ್ಲಿ ಪುಣ್ಯ ಪುರುಷನಿಗೆ ಕಾನನವು ಅರ್ಪಿಸಿದ ಪುಷ್ಪಾಂಜಲಿ ಎನ್ನುವಂತೆ ವರ್ಣಿತವಾಗಿದೆ.

''ಹೊಂಬಿಸಿಲು ಎಲ್ಲೆಡೆಗುಗು ತುಂಬಿ ನಿಂತಿರಲಾಗಿ
ಗಿರಿಪಂಕ್ತಿಗಳ ಧಾತು ಶಿಖರದಲಿ ಮಾಣಿಕ್ಯದೊಲು''.
(ಪು. ೨೩೩)

ಇಂಥ ಹಲವಾರು ಉಪಮೆಗಳು ಸಾಲುಗಟ್ಟಿ ಮೆರೆಯುವುದೂ ಉಂಟು.

ಶಬ್ದ ಚಿತ್ರಗಳನ್ನು ಕಡೆದಿಡುವ ವಿನೂತನ ರೀತಿಗೆ ಎರಡು ಉದಾಹರಣೆಗಳೆದರೆ, ಒಂದು, ದಗ್ಧ ಹೃದಯದ ಅಹಲ್ಯೆಯ ಚಿತ್ರ...

''ದುಃಖದಲ್ಲಿ ಆರ್ದ್ರವಹ ಕಪೋಲದಿಂದುರುಳುತಿರೆ
ಬೆಂಕಿ ಕೆಂಡಗಳ ತೆರದಿ ಅಶ್ರು ಜಲ ಬಿಂದುಗಳು
ಮುಚ್ಚದೆಯೆ ರೆಪ್ಪೆಗಳ ವರುಷಗಳೆ ಉರುಳಿದುವು
ಯುಗಗಳೇ ಕಳೆದಂತೆ...
(ಪು. ೨೧ ಪು. ೧೯೨)

ಎರಡನೆಯದು,ತಮಸಾ ನದಿಯ ಚಿತ್ರಣ...

''ಅಲೆಯ ಸೂತ ತಾನು ತಡೆವಂತೆ ತೋರುತಿರೆ
ಜಡೆ ಬಿಡಿಸಿದೊಲು ಹೆಣಿಕೆಯಲಿ ಹರಿಯುತಿರೆ
ಸುಳಿಯಿಂ ನಾಭಿಯನೆ ತೋರುವೊಲು ವಿಜೃಂಭಿಸಿರೆ
ಮಂದಗಾಮಿನಿಯಿಲ್ಲಿ, ಶೀಘ್ರಗಾಮಿನಿಯಲ್ಲಿ
ಮಂದಹೋಷದಿ ನೊರ್ಮೆ,
ಭೋರ್ಗರೆಯುತಿನ್ನೊರ್ಮೆ
ಹಂಸ, ಸಾರಸ,ಚಕ್ರವಾಕ, ಮಧುರ ಸಂಗೀತದಂತೆ''
(ಪ್ರಸ್ಥಾನ ೬೫ - ಪು. ೩೫೨)

ಮಹಾಕಾವ್ಯದ ಅನ್ವೇಷಣೆಯಲ್ಲಿ ''ಸೌಮಿತ್ರಿಯೇ ಎನ್ನ ಲೆಕ್ಕಣಿಕೆಗೆ ಮಹಾಬಲ'' ಎಂದಿರುವ ಕವಿಗೆ ಆತ ದಲಿತರ, ದುರ್ಬಲರ, ಶೋಷಿತರ ಧ್ವನಿಯೂ ಆಗಿದ್ದಾನೆ. ಜಾಬಾಲಿಯ ತತ್ವೋಪದೇಶಕ್ಕೆ ಪ್ರತಿಯಾಗಿ ಲಕ್ಷ್ಮಣ ಹೇಳುತ್ತಾನೆ. ''ಪರಿವರ್ತನೆಗೆ ಎಡೆಯಿರಬೇಕು ಧರ್ಮದಲಿ... ಜ್ಞಾನಕ್ಕೆ ಮಿಗಿಲಾಗಿ ವಸ್ತುಲೋಕದೊಳಗಿಲ್ಲ... ದಲಿತ ಶೂದ್ರರು ಸಹಿತ ಸರ್ವರಿಗೂ ಜ್ಞಾನದ ಬೆಳಕು ಲಭ್ಯವಿರಬೇಕು'' ಇದು ಆತನ ಆಶಯ. ನವಯುಗದ ಹರಿಕಾರನೆಂಬಂತೆ ರಾಮನಿಗೆ'' ಜಾತಿ ಕೋಟೆಯನೊಡೆದು ಭ್ರಾತೃತ್ವ ಅಹಿಂಸೆಗಳ ಬೋಧಿ ಸೈ'' - ಎಂದು ಬೇಡುತ್ತಾನೆ.

''ಲಿಂಗ ಭೇದದ ಕೊನೆಗೊಳಿಸಿ ಸಮಾನತೆಯ ದೀಕ್ಷೆ ನೀಡುವ ಹರಿಕಾರ ನೀನಾಗು ಸ್ವಾಮಿ'' ಎಂದು ಸೀತೆ ಪತಿಯನ್ನು ಪ್ರಾರ್ಥಿಸುತ್ತಾಳೆ. ಹೊಸ ಮನ್ವಂತರದ ಪ್ರತಿನಿಧಿಗಳಾಗಿ ನಿಲ್ಲುವ ಈ ಪಾತ್ರಗಳು ವರ್ತಮಾನದ ಸುಧಾರಕ ಶಕ್ತಿಗಳಾಗುವ ಕಲ್ಪನೆ ಕಾವ್ಯಕ್ಕೆ ಹೊಸತು. ಆದರೆ ರಾಮ ನಾದರೋ 'ಮರ್ಯಾದಾ ಪುರುಷೋತ್ತಮ' ರಾಮಾಯಣ ಇಲ್ಲಿಗೇ ಮುಗಿಯದು. ವಂಶ ಪರಂಪರೆಯ 'ಕರ್ತವ್ಯದ ನೊಗ' ಹೊತ್ತ ರಾಮನು 'ಧರ್ಮ ಕವಚ ಧರಿಸಿದ್ದೇನೆ' ಲೋಕ ಪರಂಪರೆಯ ಕಾಪಿಡಲೆಬೇಕು; ಒಪ್ಪಲಾರೆನು ನಿಮ್ಮ ವಾದಗಳ' ಎಂದು ಈ ಇಬ್ಬರ ಮಾತುಗಳನ್ನು ತೆರೆಮರೆಗೆ ಸರಿಸಿ ಬಿಡುತ್ತಾನೆ. ರಾಮಪಾತ್ರದ ಭೂಮಿಕೆ ಸಿದ್ಧವಾಗುವುದು ಇಲ್ಲೇ. ಮುಂದಿನ ಕಥಾಭಿತ್ತಿಯಲ್ಲಿ ಬರೆದಿಡಬೇಕಾದ ಎಷ್ಟೋ ಸಂಗತಿಗಳಿಗೆ ರಾಮನೇ ಕೇಂದ್ರ ಬಿಂದು. ಇಂಥದೊಂದು ಪೂರ್ವ ಸೂಚನೆಯಿಂದ ರಾಮನ ಪಾತ್ರ ಆಕಾರಗೊಳ್ಳುತ್ತ ನಡೆದಿದೆ. ಟಿ.ಎಸ್. ವೆಂಕಣ್ಣಯ್ಯನವರು ಹೇಳಿದಂತೆ 'ರಾಮಾಯಣಂ ವಿರಾಮಾಯಣಂ' ಅದು ಅವಸರದಲ್ಲಿ ಮುಗಿಯಲಾರದು.

''ಎರಗುವೆನು ತತ್ವಕ್ಕೆ, ಎರಗುವೆನು ಸತ್ಯಕ್ಕೆ' - ಇದು ಕವಿಯವಾಣಿ. ನಡುಗನ್ನಡದ ವಚನಕಾರರು, ನಿಷ್ಠುರ ಸತ್ಯವಾದಿ ಸರ್ವಜ್ಞ, ಹೀಗೆ ಹಲವಾರು ವಿಭೂತಿಗಳ ಪ್ರಭಾವವೂ ಈ ನಮ್ಮ ಕವಿಯ ಮೇಲೆ ಆಗಿದೆ. ತಿರುಳು ಗನ್ನಡಕ್ಕೆ ಅಲ್ಲಲ್ಲಿ ಹಳೆಗನ್ನಡದ ಪದ ಪ್ರಯೋಗಗಳು ಮಾಲೆ ಹಾಕಿವೆ. ಶ್ಲೇಷೆಗಳನ್ನು ಕೂಡಿಸಿಕೊಂಡರೆ ಶೈಲಿ ಮತ್ತಷ್ಟು ಬಂಧುರವೆನಿಸಿಬಹುದು.

ಅನ್ವೇಷಣೆ, ಸತ್ಯದರ್ಶನದೆಡೆಗೆ, ಕವಿಗೆ ಗೆಲುವಾಗಲಿ.

+

## ಸುತ್ತಮುತ್ತ

### ಶ್ರೀ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯದ ಮುಂಬಯಿ ಬಿಡುಗಡೆ

ಜನರ ಬದುಕಿಗೆ ಸಂಬಂಧಿಸಿದ ಸಾಹಿತ್ಯವು ಶ್ರೇಷ್ಠ ಸಾಹಿತ್ಯವಾಗಲು ಸಾಧ್ಯ, ಕಾರಣ ಇದು ಜನಮತವನ್ನು ಸ್ಪಂದಿಸುವದು, ಈ ದಿಸೆಯಲ್ಲಿ ವೀರಪ್ಪ ಮೊಯಿಲಿಯವರ ''ಶ್ರೀ ರಾಮಾಯಣ ಮಹಾನ್ವೇಷಣಂ'' ಮಹಾಕಾವ್ಯವು ಒಂದು, ಎಂದು ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಸಚಿವೆ ರಾಣಿ ಸತೀಶ್ ಅಭಿಪ್ರಾಯ ಪಟ್ಟರು.



*ವೀರಪ್ಪ ಮೊಯಿಲಿಯವರ 'ಶ್ರೀ ರಾಮಾಯಣ ಮಹಾನ್ವೇಷಣಂ' ಮಹಾಕಾವ್ಯದ ಬಿಡುಗಡೆ ಸಮಾರಂಭವನ್ನು ಸಚಿವೆ ರಾಣಿ ಸತೀಶ್ ಅವರು ದೀಪ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ರವಿ ರಾ. ಅಂಚನ್, ಧರ್ಮಪಾಲ್ ದೇವಾಡಿಗ, ಸೂರು ಸಿ. ಕರ್ಕೇರ, ಶ್ರೀಮತಿ ಮಾಲತಿ ವಿ. ಮೊಯಿಲಿ, ವೀರಪ್ಪ ಮೊಯಿಲಿ, ಡಾ. ಬಿ.ಎ. ವಿವೇಕ್ ರೈ, ಎಂ.ಎ.ಎನ್. ಪ್ರಸಾದ್, ವಸಂತ ಕಾರ್ಕಳ್ ಅವರಿದ್ದಾರೆ.*

ಅವರು ದಿನಾಂಕ 21-10-2001ರಂದು ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಕರ್ನಾಟಕ ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿಯವರ 'ಶ್ರೀ ರಾಮಾಯಣ ಮಹಾನ್ವೇಷಣಂ' ಕನ್ನಡ ಮಹಾಕಾವ್ಯದ ಬಿಡುಗಡೆ ಸಮಾರಂಭದ ಮುಖ್ಯ ಅತಿಥಿ ಸ್ಥಾನ ವಹಿಸಿ ಕಾರ್ಯಕ್ರಮವನ್ನು ವಿದ್ಯುಕ್ತವಾಗಿ ಉದ್ಘಾಟಿಸಿ ಕೃತಿಯನ್ನು ಬಿಡುಗಡೆಗೊಳಿಸಿ ಮಾತಾಡುತ್ತಿದ್ದರು.

ಭಾರತ ಸಂಸ್ಕೃತಿಯು ವಿಶ್ವಕ್ಕೆ ಮಾರ್ಗದರ್ಶಿಯಾಗಿ ಮೆರೆಯಬೇಕು. ರಾಮಾಯಣವು ಜಗತ್ತಿನಲ್ಲೇ ಮಹಾಕಾವ್ಯವಾಗಿ ಮೆರೆದಿದೆ. ರಾಮಾಯಣ, ಮಹಾಭಾರತ ಮಹಾಕಾವ್ಯಗಳೇ ಭಾರತದ ಸಂಸ್ಕೃತಿಯ ಉಳಿವಿಗೆ ಮೂಲವಾಗಿದೆ ಎಂದು ಮಹಾಕಾವ್ಯದ ಕರ್ತೃ ವೀರಪ್ಪ ಮೊಯಿಲಿಯವರು ಕೃತಿ ಬಿಡುಗಡೆ ಸಮಾರಂಭದಲ್ಲಿ ಹೇಳಿದರು.,

ಮೊಯಿಲಿಯವರ 'ರಾಮಾಯಣ ಮಹಾನ್ವೇಷಣಂ' ಮಹಾಕಾವ್ಯ ಕರ್ನಾಟಕದ ಕೆಲವು ಕಡೆಗಳಲ್ಲಿ ಈಗಾಗಲೇ ಬಿಡುಗಡೆಯಾಗಿದ್ದು ಮುಂಬಯಿಯಲ್ಲಿ ಬಿಡುಗಡೆಯಾದುದು ನನಗೆ ತುಂಬಾ ಸಂತೋಷವಾಗಿದೆ. ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ರಾಜ್ಯವಿಡೀ ಸುತ್ತಾಡಿದ ಮೊಯಿಲಿಯವರು ಇದೀಗ ಮುಂಬಯಿಯಲ್ಲಿ ತನ್ನ ಕೃತಿಯನ್ನು ಬಿಡುಗಡೆಗೊಳಿಸಿ ಸೀಮೋಲ್ಲಂಘನ ಮಾಡಿದ್ದಾರೆ ಎಂದು ಕಾರ್ಯಕ್ರಮದ ಅಧ್ಯಕ್ಷ ಡಾ. ಬಿ. ವಿವೇಕ ರೈ ಹೇಳಿದರು. (ಇವರು ಮಂಗಳೂರು ವಿ.ವಿ. ಕನ್ನಡ ವಿಭಾಗದ ಮುಖ್ಯಸ್ಥರು) ಕರ್ನಾಟಕ ಸಂಘದ ಅಧ್ಯಕ್ಷ ರವಿ ರಾ. ಅಂಚನ್ ಅವರು ಸ್ವಾರಸ್ಯಮಯವಾಗಿ ಕೃತಿಯ ಪರಿಚಯ ನೀಡಿದರು.

ದೇವಾಡಿಗ ಸಂಘದ ಅಧ್ಯಕ್ಷ ಧರ್ಮಪಾಲ ಯು. ದೇವಾಡಿಗರು ಸ್ವಾಗತಿಸಿದರೆ ಪ್ರಾಸ್ತಾವಿಕವಾಗಿ ದೇವಾಡಿಗ ಸಂಘದ ಕಾರ್ಯದರ್ಶಿ ವಸಂತ ಕಾರ್ಕಳ ಮಾತನಾಡಿದರು. ಸಮಾರಂಭದ ಆರಂಭವು ಪದ್ಮನಾಭ ಶೆಟ್ಟಿಯವರ ಪ್ರಾರ್ಥನೆಯಿಂದಾಯ್ತು. ಕೃತಿಕರ್ತ ಮೊಯಿಲಿ ಮತ್ತು ಅವರ ಶ್ರೀಮತಿಯವರನ್ನು ದೇವಾಡಿಗ ಸಂಘ, ಕರ್ನಾಟಕ ಸಂಘ, ಮೈಸೂರು ಅಸೋಸಿಯೇಷನ್ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಜಂಟಿ ಸಂಘಗಳ ವತಿಯಿಂದ ಹಾರಾರ್ಪಣೆ ಮಾಡಿ ನೆನಪಿನ ಕಾಣಿಕೆ ಕೊಟ್ಟು ಸನ್ಮಾನಿಸಲಾಯಿತು. ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿಯ ವತಿಯಿಂದ ಸಮಿತಿ ಸಲಹೆಗಾರ ಡಾ. ಸಂಜೀವ ಶೆಟ್ಟಿಯವರನ್ನು ಮೊಯಿಲಿಯವರನ್ನು ಶಾಲು ಹೊದಿಸಿ ಸನ್ಮಾನಿಸಿದರು.

ಕಾರ್ಯಕ್ರಮ ದೇವಾಡಿಗ ಸಂಘ, ಕರ್ನಾಟಕ ಸಂಘ, ಮೈಸೂರು ಅಸೋಸಿಯೇಶನ್, ಕನ್ನಡ ಸಾಹಿತ್ಯ ಪರಿಷತ್ತುಗಳ ಜಂಟಿ ಆಶ್ರಯದಲ್ಲಿ ನಡೆದಿದ್ದು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದ ಬಿಲ್ಲವ ಜಾಗೃತಿ ಬಳಗ, ಮುಂಬಯಿ ಇದರ ಅಧ್ಯಕ್ಷ ಸೂರು ಸಿ. ಕರ್ಕೇರ, ಜಯಶ್ರೀ ಕೃಷ್ಣ ಪರಿಸರ ಪ್ರೇಮಿ ಸಮಿತಿಯ ತೋನ್ಸೆ ಜಯಕೃಷ್ಣ ಶೆಟ್ಟಿ, ಮೈಸೂರು ಅಸೋಸಿಯೇಶನಿನ ಕಾರ್ಯದರ್ಶಿ ಎಂ.ಎ.ಎನ್. ಪ್ರಸಾದ್, ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಜಿ.ಡಿ. ಜೋಶಿಯವರು ಸಂದರ್ಭೋಚಿತವಾಗಿ ಮೊಯಿಲಿಯವರಿಗೆ ಅಭಿನಂದನಾ ಮಾತುಗಳನ್ನಾಡಿ ಶುಭ ಹಾರೈಸಿದರು.

ಅತಿಥಿಗಳನ್ನು ಪರಿಚಯಿಸಿ ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ಸಂಘದ ಕಾರ್ಯದರ್ಶಿ ಭರತ್‌ಕುಮಾರ್ ಪೊಲಿಪು ಮಾಡಿದರು. ಕೆ. ಮಂಜುನಾಥಯ್ಯ ಅವರು ವಂದನಾರ್ಪಣೆಗೈದರು.

ಮಹಾಕಾವ್ಯದ ವಿಚಾರ ಸಂಕಿರಣ ಕಾರ್ಯಕ್ರಮ ಡಾ. ಜಿ.ಡಿ. ಜೋಶಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಕಿರಣದಲ್ಲಿ ಡಾ. ಸುನೀತಾ ಶೆಟ್ಟಿ, ಡಾ. ಸಂಜೀವ ಶೆಟ್ಟಿ, ಡಾ. ಗಣೇಶ್ ಉಪಾಧ್ಯ ಅವರು ಮಾತನಾಡಿದರು ಕವಿ ಬಿ. ಎಸ್. ಕುರ್ಕಾಲ್ ಮತ್ತು ಪದ್ಮನಾಭ ಸಸಿಹಿತ್ಲು ಮಹಾಕಾವ್ಯವನ್ನು ವಾಚಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಗೋಪಾಲ ತ್ರಾಸಿ ಮತ್ತು ಕೆ. ಮಂಜುನಾಥಯ್ಯ ಅವರು ಮಾಡಿದರು. ಕೊನೆಗೆ ಮುಂಬಯಿ ಮತ್ತು ಪರಿಸರದ 18 ಸಂಘ ಸಂಸ್ಥೆಗಳಿಗೆ ಮಹಾಕಾವ್ಯ ಕೃತಿಕರ್ತರಿಂದ ಮಹಾಕಾವ್ಯದ ಗ್ರಂಥ ಗೌರವ ನಡೆಯಿತು.

### ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ, ಮುಂಬಯಿ ನೂತನ ಕಾರ್ಯಕಾರಿ ಸಮಿತಿಯ ಚಟುವಟಿಕೆಗಳ ಉದ್ಘಾಟನಾ ಸಮಾರಂಭ

ಮುಂಬಯಿಯಲ್ಲಿ ಹಲವಾರು ಕನ್ನಡ ಸಂಘ ಸಂಸ್ಥೆಗಳಿವೆ. ಅವು ನಡೆಸುತ್ತಿರುವ ಕನ್ನಡ ಸಾಹಿತ್ಯಿಕ ಚಟುವಟಿಕೆಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಮಾದರಿ ಒದಗಿಸಬೇಕೆಂದು ರವಿ ರಾ. ಅಂಚನ್ ಅವರು ತಮ್ಮ ಅಧ್ಯಕ್ಷೀಯ ಬಾಷಣದಲ್ಲಿ ಸೂಚಿಸಿದರು.

ಮಾತುಂಗಾ ಪಶ್ಚಿಮದಲ್ಲಿ ಕರ್ನಾಟಕ ಸಂಘದ ಕಿರು ಸಭಾಗೃಹದಲ್ಲಿ ಇತ್ತೀಚೆಗೆ 6-10-2001ರಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು.

ಹಿರಿಯರಾದ ಯಕ್ಷಗಾನ ಅರ್ಥಧಾರಿ ಅಡ್ಡೆ ವಾಸು ಶೆಟ್ಟಿ ಅವರು ನೂತನ ಸಮಿತಿಯ ಚಟುವಟಿಕೆಗಳನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಡಾ. ಜಿ.ಡಿ. ಜೋಶಿ ಅವರ ಅಂಕಣ ಬರಹಗಳ ಸಂಕಲನ 'ಅಜಾತ ಶತ್ರುವಿನ ಆಸ್ಥಾನದಲ್ಲಿ' ಎಂಬ ಗ್ರಂಥ ಬಿಡುಗಡೆಯನ್ನೂ ವಾಸುಶೆಟ್ಟಿ ಅವರು ಮಾಡಿದರು. ಮುಂಬಯಿ ನಗರದಲ್ಲಿ ಕನ್ನಡವನ್ನು ಉಳಿಸಿ ಬೆಳೆಸಲು ಎಲ್ಲರೂ ಮನಸಾ ಪ್ರಯತ್ನಿಸಬೇಕೆಂದು ಮನವಿ ಮಾಡಿದರು.

'ಕರ್ನಾಟಕ ಮಲ್ಲ' ಪತ್ರಿಕೆಯ ಸಂಪಾದಕರಾದ ಚಂದ್ರಶೇಖರ್ ಪಾಲೆತ್ತಾಡಿ ಅವರು ಜೋಶಿ ಅವರ 'ಅಜಾತ ಶತ್ರುವಿನ ಆಸ್ಥಾನದಲ್ಲಿ' ಕೃತಿಯ ಸಮಗ್ರ ಪರಿಚಯ ಮಾಡಿಕೊಟ್ಟರು.

ಡಾ. ಜಿ.ಡಿ. ಜೋಶಿ ಅವರು ಸ್ವಾಗತಿಸಿ, ಪರಿಷತ್ತಿನ ಮಹಾರಾಷ್ಟ್ರ ಘಟಕದ ಕಾರ್ಯವ್ಯಾಪ್ತಿಯನ್ನು ಹಾಗೂ ಈ ವರುಷದ ಚಟುವಟಿಕೆಗಳ ಸ್ಥೂಲ ರೂಪ ರೇಷೆಯನ್ನು ಸಂಕ್ಷಿಪ್ತವಾಗಿ ನೀಡಿದರು. ಕಾರ್ಯಕ್ರಮದ ಈ ಮೊದಲ ಭಾಗದ ನಿರ್ವಹಣೆಯ ಜವಾಬ್ದಾರಿಯನ್ನು ಪ್ರಾ. ಸೀತಾರಾಮ ಶೆಟ್ಟಿ ವಹಿಸಿಕೊಂಡಿದ್ದರು.

ಅನಂತರ ನಡೆದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಸುನೀತಾ ಎಂ. ಶೆಟ್ಟಿ ವಹಿಸಿದ್ದರು. ಕವಿಗೋಷ್ಠಿಯಲ್ಲಿ ಎಚ್. ದುಂಡಿರಾಜ್, ಕೆ. ಎಸ್. ಹೆಗಡೆ, ಪ್ರೊ. ಸೀತಾರಾಮ ಶೆಟ್ಟಿ, ಡಾ. ಸುನೀತಿ ಉದ್ಯಾವರ್, ಡಾ. ಗಿರಿಜಾ ಶಾಸ್ತ್ರಿ, ಶ್ರೀಮತಿ ತುಳಸಿ ವೇಣುಗೋಪಾಲ್, ಶ್ರೀಮತಿ ಹಾ. ಮಾ. ಕನಕ, ಜಿ.ಪಿ. ಕುಸುಮಾ ಮತ್ತು ಸಾ.ದಯಾ ಭಾಗವಹಿಸಿದ್ದರು.

ಶ್ರೀ ಚಂದ್ರಶೇಖರ್ ರಾವ್ ಅವರು ಕಾರ್ಯಕ್ರಮದ ಈ ಭಾಗದ ನಿರ್ವಹಣಾ ಕಾರ್ಯವನ್ನು ನಡೆಸಿಕೊಟ್ಟರು.

### ಎಂ.ಫಿಲ್ ಅಧ್ಯಯನಕ್ಕೆ ಅರ್ಜಿ ಆಹ್ವಾನ

ಮುಂಬಯಿ, ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ 2001-2002ನೇ ಸಾಲಿನ ಎಂ.ಫಿಲ್ ತರಗತಿಗಳಿಗೆ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು ಹೆಚ್ಚಿನ ಮಾಹಿತಿಯನ್ನು ವಿಭಾಗದ ಕಚೇರಿಯಿಂದ ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸಲು 3-12-2001 ಕೊನೆ ದಿನವಾಗಿದ್ದು ಆಸಕ್ತರು ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

The Head, Dept. of Kannada, Univ. of Mumbai. Vidyanagari, Mumbai-400 098.

ಅಂಚೆ ಮುಖಾಂತರ ಅರ್ಜಿ ಪಡೆಯಲಿಚ್ಛಿಸುವವರು 50/- ರೂ. ಎಂ.ಓ. ಅಥವಾ ಡಿ.ಡಿ.ಯನ್ನು ಕಳುಹಿಸಿಕೊಡಬೇಕು. ಜೊತೆಗೆ ಎಂಟು ರೂ. ಅಂಚೆ ಚೀಟಿ ಹಚ್ಚಿದ ಕವರನ್ನು ಜೊತೆಗಿರಿಸಬೇಕು.

### ಮೂವರಿಗೆ ಎಂ.ಫಿಲ್ ಪದವಿ

ಮುಂಬಯಿ, ಕನ್ನಡ ವಿಭಾಗದ ಮೂಲಕ ಸಿದ್ಧಪಡಿಸಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮೂರು ಎಂ.ಫಿಲ್ ಸಂಪ್ರಬಂಧಗಳನ್ನು ಮುಂಬಯಿ ವಿಶ್ವವಿದ್ಯಾಲಯವು ಮಾನ್ಯಮಾಡಿ ಮೂವರಿಗೆ ಕನ್ನಡದಲ್ಲಿ ಎಂ.ಫಿಲ್ ಪದವಿಯನ್ನು ನೀಡಿದೆ.

ಶ್ರೀ ಸ್ವಾಮಿ ಜಿ. ಎಸ್. ಅವರು ಬರೆದು ಸಲ್ಲಿಸಿದ 'ದೇಶಿ ಕೇಂದ್ರ ಸಂಗನ ಬಸವಯ್ಯನ ವಚನಗಳು ಒಂದು ಅಧ್ಯಯನ' ಎಂಬ ಸಂಪ್ರಬಂಧಕ್ಕೆ ಎಂ.ಫಿಲ್ ಪದವಿ ದೊರಕಿದೆ. ಸಂಗನ ಬಸವಯ್ಯ ಅಲಕ್ಷಿತ ವಚನಕಾರರಲ್ಲಿ ಒಬ್ಬರು. ಇವರ ಕುರಿತು ಅಧ್ಯಯನ ನಡೆಸಿದ ಸ್ವಾಮಿ ಗುರುಸಿದ್ಧಯ್ಯ ಅವರು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ.ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ತಮ್ಮ ಪ್ರಬಂಧವನ್ನು ಬರೆದು ಸಲ್ಲಿಸಿದರು.

ವಿಶ್ವವಿದ್ಯಾಲಯವು ಶ್ರೀ ಪ್ರಭು ಅಂಗಡಿ ಅವರ 'ನೀನಾಸಂ ಒಂದು ಅಧ್ಯಯನ' ಎಂಬ ಸಂಪ್ರಬಂಧವನ್ನು ಮನ್ನಿಸಿ ಅವರಿಗೆ ಎಂ.ಫಿಲ್ ಪದವಿಯನ್ನು ನೀಡಿದೆ. ಶ್ರೀ ವಿಜಯಾನಂದ ವಗ್ಗೆ ಅವರು ಬರೆದು ಸಲ್ಲಿಸಿದ 'ದೇವನೂರು ಮಹಾದೇವ ಅವರ ಕಥೆಗಳು - ಒಂದು ಅಧ್ಯಯನ' ಎಂಬ ಸಂಪ್ರಬಂಧವನ್ನು ಮುಂಬಯಿ ವಿ.ವಿ. ಎಂ.ಫಿಲ್ ಪದವಿಗೆ ಅಂಗೀಕರಿಸಿದೆ. ಇವರಿಬ್ಬರು ಡಾ. ಕೆ. ರಘುನಾಥ್ (ಆರ್. ಜೆ. ಕಾಲೇಜು, ಮುಂಬಯಿ) ಅವರ ಮಾರ್ಗದರ್ಶ

### ರಂಗಭೂಮಿಯ ಬಗೆ ಗಾಢಾದ ಚಿಂತನೆಯನ್ನು ಹಮ್ಮಿಕೊಳ್ಳಬೇಕಾಗಿದೆ : ಜಿ.ಕೆ. ಐತಾಳ್

ಶಾಯ್ನಾಡಿನಿಂದ ದೂರ ಮುಂಬಯಿಯ ವೇದಿಕೆಯಲ್ಲಿ ಪ್ರಥಮ ಬಾರಿ ಮಾತಾಡುತ್ತಿದ್ದೇನೆ. ಬಾಲರಂಗಭೂಮಿಯ ಬಗ್ಗೆ ಮಾತಾಡಲು ಅವಕಾಶ ಮಾಡಿಕೊಟ್ಟ ಕರ್ನಾಟಕ ಸಂಘಕ್ಕೆ ನನ್ನ ಕೃತಜ್ಞತೆಗಳು. ಮಕ್ಕಳ ರಂಗಭೂಮಿಯ ಬಗ್ಗೆ ಗಾಢವಾದ ಚಿಂತನೆಯನ್ನು ಹಮ್ಮಿಕೊಳ್ಳಬೇಕಾಗಿದೆ. ಮಕ್ಕಳ ಮನಸ್ಸನ್ನು ನಾವು ಸುಡುತ್ತಾ ಇದ್ದೇವೆ. ಈಗ ಹಿಂದಿನಂತೆ ಸುರುಳಿಯ ಪರದೆಗಳಿಲ್ಲ. ಕತೆಗಳಿಲ್ಲ. ಎಲ್ಲವೂ ಕೃತಕವಾಗಿದೆ ಎಂದು ಪ್ರಖ್ಯಾತ ರಂಗ ನಿರ್ದೇಶಕ ವಿಮರ್ಶಕ, ಕತೆಗಾರ ಜಿ. ಕೆ. ಐತಾಳ್ ದಿನಾಂಕ 20-10-01ರಂದು ಕರ್ನಾಟಕ ಸಂಘ ಮುಂಬಯಿಯ 'ಸಾಹಿತ್ಯ ಭಾರತಿ'ಯ ವತಿಯಿಂದ ಹಮ್ಮಿಕೊಂಡ ಸದಾನಂದ ಸುವರ್ಣ ದತ್ತಿನಿಧಿಯ ಕಾರ್ಯಕ್ರಮದ ಮುಖ್ಯ ಅತಿಥಿಯ ಸ್ಥಾನದಿಂದ ಬಾಲರಂಗ ಭೂಮಿಯ ಬಗ್ಗೆ ಉಪನ್ಯಾಸ ನೀಡುತ್ತಿದ್ದರು.

ಅವರು ಮುಂದುವರಿಯುತ್ತಾ ಇಂದು ಕೇವಲ ಕಲೆ ಮಾತ್ರವಲ್ಲ ಮಾನವ ಬದುಕಿನ ಅಧ್ಯಯನದ ಅಗತ್ಯವಿದೆ ಕಾರಣ ಬದುಕಿಗೂ ರಂಗಭೂಮಿಗೂ ಗಾಢವಾದ ಸಂಬಂಧವಿದೆ. ಮಕ್ಕಳ ನಾಟಕವು ಶಾಲಾ ಮಾಸ್ತರರ ಕೈಗಳಲ್ಲಿ ಸಿಲುಕಿ ಹಾಕಿಕೊಂಡಿದ್ದು ದುಃಖದ ವಿಷಯ. ಶಾಲಾ ವಾರ್ಷಿಕೋತ್ಸವದಲ್ಲಿ 'ಕ್ಯಾಸೆಟ್' ಹಾಕಿ ಕುಣಿಯುವುದೇ ಪ್ರಮುಖವಾಗಿದೆ. ಸ್ಪಂದನಶೀಲತೆ ಮಾಯವಾಗಿದೆ. ಮಕ್ಕಳಿಗೆ ಅರ್ಥವಾಗುವಂತಹ ನಾಟಕಗಳ ಅಗತ್ಯವಿದೆ. ಮುಖ್ಯವಾಗಿ ನಾಟಕದಲ್ಲಿ ಹಾವಭಾವ, ದೃಶ್ಯ, ಬಣ್ಣ ಪ್ರಧಾನವಾಗಿರಬೇಕು. ನಾಟಕಗಳ ವಿವಿಧ ಶೈಲಿ ವೃತ್ತಿಪರ, ಹವ್ಯಾಸಿಯ ಜೊತೆ ಜಾನಪದ ರಂಗಭೂಮಿಯ ಯಕ್ಷಗಾನ, ಗೊಂಬೆಯಾಟದ ಪ್ರದರ್ಶನವೂ ಆಗಬೇಕಾಗಿದೆ. ವಿಶ್ವವಿದ್ಯಾಲಯ, ಸಂಘ ಸಂಸ್ಥೆಗಳು ಮತ್ತು ಶಿಕ್ಷಣಕೇಂದ್ರಗಳು ಈ ನಿಟ್ಟಿನಲ್ಲಿ ಪ್ರೋತ್ಸಾಹನ ನೀಡಬೇಕಾಗಿದೆ. 21ನೇ ಶತಮಾನ ಎಲ್ಲ ಪಡೆದುಕೊಂಡರೂ ಎಲ್ಲವನ್ನೂ ಕಳೆದುಕೊಂಡಿರುವುದು ದುರಾದೃಷ್ಟ ಎಂದು ಕಳಕಳಿಯಿಂದ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ಕರ್ನಾಟಕ ಸಂಘದ ಅಧ್ಯಕ್ಷ ರವಿ ರಾ. ಅಂಚನ್ ಎಲ್ಲರನ್ನೂ ಸ್ವಾಗತಿಸುತ್ತಾ "ಬಾಲ ರಂಗಭೂಮಿಯ ಬಗ್ಗೆ ಕರ್ನಾಟಕ ಸಂಘವು ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಭರತ್‌ಕುಮಾರ್ ಪೊಲಿಪು, ದಿನೇಶ್ ಕುಡವರವರು ತುಂಬಾ ಶ್ರಮಿಸುತ್ತಿದ್ದಾರೆ. 'ಕಿನಾರ' - ಕಿರಿಯರ ನಾಟಕ ರಂಗವು ಕಳೆದ ಎರಡು ವರ್ಷಗಳಿಂದ ಕಿರಿಯರಿಂದ ನಾಟಕಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ. ಇನ್ನು ಮುಂದೆಯೂ ಶಾಲಾ ಮಕ್ಕಳಿಂದ ನಾಟಕಗಳ ಹೊಸ ಹೊಸ ಪ್ರಯೋಗಗಳನ್ನು ಹಮ್ಮಿಕೊಳ್ಳುವ ಯೋಜನೆಯನ್ನು ಹಾಕಿಕೊಳ್ಳುತ್ತಿದ್ದಾರೆ" ಎಂದು ತಿಳಿಸಿದರು.

ಮುಖ್ಯ ಅತಿಥಿ ಜಿ.ಕೆ. ಐತಾಳ್‌ರವರ ಮತ್ತು "ಸೂರ್ಯ ಬಂದ" ನಾಟಕದ ನಿರ್ದೇಶಕಿ ಅಹಲ್ಯಾ ಬಲ್ಲಾಳರ ಪರಿಚಯವನ್ನು ಭರತ್ ಕುಮಾರ್ ಪೊಲಿಪು ನೀಡಿದರು. ಅಧ್ಯಕ್ಷ ರವಿ ರಾ. ಅಂಚನ್ ಮುಖ್ಯ ಅತಿಥಿಯವರಿಗೆ ನೆನಪಿನ ಕಾಣಿಕೆ ಮತ್ತು ಹೂ ಗುಚ್ಛ ಕೊಟ್ಟು ಗೌರವಿಸಿದರೆ, ಉಪಾಧ್ಯಕ್ಷ ಎಮ್. ಎಮ್. ಕೋರಿಯವರು ಅಹಲ್ಯಾ ಬಲ್ಲಾಳರಿಗೆ ನೆನಪಿನ ಕಾಣಿಕೆ, ಹೂಗುಚ್ಛಕೊಟ್ಟು ಗೌರವಿಸಿದು.

ಕಾರ್ಯಕ್ರಮದ ನಿರ್ವಹಣೆಯನ್ನು ಭರತ್‌ಕುಮಾರ್ ಪೊಲಿಪು ಮಾಡಿ ಕೊನೆಗೆ ವಂದಿಸಿದರು.

ಕಾರ್ಯಕ್ರಮದ ಕೊನೆಯ ಅಂಗವಾಗಿ 'ಸೂರ್ಯಬಂದ' ವೈದೇಹಿಯವರು ರಚಿಸಿದ ಕನ್ನಡ ನಾಟಕವನ್ನು ಅಹಲ್ಯಾ ಬಲ್ಲಾಳರ ನಿರ್ದೇಶನದಲ್ಲಿ ಎನ್.ಕೆ.ಇ.ಎಸ್. ಶಾಲಾ ಮಕ್ಕಳು ಯಶಸ್ವಿಯಾಗಿ ಪ್ರದರ್ಶಿಸಿದರು.

### ಮಾಸ್ತಿ ಕನ್ನಡದ ಆಸ್ತಿ ಜನತೆ ಪ್ರೀತಿಯಿಂದ ಕೊಟ್ಟ ಕುರುಹು -- ವಿ. ರಾಮಚಂದ್ರಪ್ಪ

"ನಾನು ಕನ್ನಡದ ಆಸ್ತಿ ಹೌದೋ ಅಲ್ಲವೋ ನನಗೆ ತಿಳಿಯದು. ಆದರೆ ಮಾಸ್ತಿ ಕನ್ನಡದ ಆಸ್ತಿ ಎಂಬುದು ಕನ್ನಡ ಜನತೆ ಪ್ರೀತಿ ವಿಶ್ವಾಸದಿಂದ ಹೇಳಿದ ಮಾತುಗಳವು ಎಂದು ನಮ್ಮಜ್ಜ ಆಗಾಗ್ಗೆ ಜನತೆ ಪ್ರೀತಿ ವಿಶ್ವಾಸದಿಂದ ಹೇಳಿದ ಮಾತುಗಳವು ಎಂದು ನಮ್ಮಜ್ಜ ಆಗಾಗ್ಗೆ ಹೇಳುತ್ತಿದ್ದರು" ಎಂದು ಮಾಸ್ತಿಯವರ ಮೊಮ್ಮಕ್ಕಳೂ, ಮಾಸ್ತಿ ಅಧ್ಯಯನ ಪೀಠ ಬೆಂಗಳೂ, ಇದರ ಅಧ್ಯಕ್ಷರೂ ಆದ ಶ್ರೀ ಪಿ. ರಾಮಭದ್ರ ತಿಳಿಸಿದರು. ಅವರು ಮೈಸೂರು ಸಂಗೀತ ವಿದ್ಯಾಲಯ, ಡೊಂಬಿವಲಿ ಮತ್ತು ಮಾಸ್ತಿ ಅಧ್ಯಯನ ಪೀಠ, ಬೆಂಗಲೂರು ಅವರ ಸಂಯುಕ್ತ ಆಶ್ರಯದಲ್ಲಿ ಡೊಂಬಿವಲಿಯಲ್ಲಿ ಏರ್ಪಡಿಸಿದ್ದ 'ಮಾಸ್ತಿ ಸ್ಮರಣೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಾ ಮಾತನಾಡಿದರು. ಕನ್ನಡಕ್ಕೆ ಅಪಾರ ಸಾಹಿತ್ಯ ಸಂಪತ್ತನ್ನು ಬಿಟ್ಟು ಹೋಗಿರುವ ಮಾಸ್ತಿಯವರ ಸಾಹಿತ್ಯ ಶಾಶ್ವತವಾಗಿ ಉಳಿಯುವಂತಹ ಪ್ರಯತ್ನಗಳನ್ನು ಅಧ್ಯಯನ ಪೀಠ ಮಾಡುತ್ತಿದೆ.

Regn. No. 040015/86
Regn. No. TECH/47-202/MBI-2001
Date of Posting : 10-11-2001

ಇದೇ ನಾವು ಮಾಡುವ ಸಣ್ಣ ಪ್ರಮಾಣದ ಆರಾಧನೆ. ಇದಕ್ಕಾಗಿ ಎಲ್ಲರೂ ಸಹಕರಿಸಬೇಕೆಂದು ಕೇಳಿದರು. ಭಾಷಣಕಾರರಾಗಿ ಆಗಮಿಸಿದ್ದ ಡಾ. ಶ್ರೀಮತಿ ಗಿರಿಜಾ ಶಾಸ್ತ್ರಿಯವರು ಮಾಸ್ತಿಯವರ ಸಾಹಿತ್ಯದಲ್ಲಿ ಸ್ತ್ರೀ ಪಾತ್ರಗಳ ಬಗ್ಗೆ ವಿಶ್ಲೇಷಣೆ ಮಾಡಿದರು. ಮಾಸ್ತಿಯವರು ಎಲ್ಲ ಬಗೆಯ ಜನರ ಆಂತರಿಕ ತೊಳಲಾಟಗಳನ್ನು ತಮ್ಮ ಕತೆಗಳ ಮೂಲಕ ಸೆರೆ ಹಿಡಿದಿರೆ ಅದರಲ್ಲೂ ಸ್ತ್ರೀ ಪಾತ್ರಗಳಲ್ಲಿ ಸಾಂಪ್ರದಾಯಿಕ ಮತ್ತು ಆಧುನಿಕ ಮೌಲ್ಯಗಳು ಮೇಳೈಸುತ್ತದೆ. ಮಾಸ್ತಿಯವರು ಕನ್ನಡ ಕಥಾ ಪರಂಪರೆಯ ನಿರ್ಮಾಪಕರಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಡಾ. ಕೆ. ರಘುನಾಥ್ ಮಾಸ್ತಿಯವರ ನೆನಪುಗಳನ್ನು ಹಂಚಿಕೊಳ್ಳುತ್ತಾ ಮಾಸ್ತಿಯವರ ಸಾಹಿತ್ಯ ಬದುಕನ್ನು ಹಸನುಮಾಡುವುದು ಹೇಗೆ ಎಂಬುದನ್ನು ತಿಳಿಸುತ್ತದೆ. ಮಾಸ್ತಿಯವರು ಕೇವಲ ಸಾಹಿತ್ಯ ಸೃಷ್ಟಿ ಮಾಡಲಿಲ್ಲ, ಸಾಹಿತಿಗಳನ್ನು ಸೃಷ್ಟಿಸಿದರು. ಇವರು ಬಿಟ್ಟು ಹೋದ ಆಸ್ತಿಯನ್ನು ಕಾಪಾಡಿಕೊಳ್ಳುವುದು ಕನ್ನಡಿಗರೆಲ್ಲರ ಕರ್ತವ್ಯ ಎಂದು ತಿಳಿಸಿದರು.

ಸಂಗೀತ ವಿದುಷಿ ಶ್ರೀಮತಿ ಉಮಾನಾಗಭೂಷಣ್ ರಾಗ ಸಂಯೋಜಿಸಿ ಮಾಸ್ತಿಯವರ ಕವನಗಳನ್ನು ವಿದ್ಯಾಲಯದ ವಿದ್ಯಾರ್ಥಿಗಳಾದ ಸಾಮಾನ್ಯ, ಅರುಣ, ಸುಕನ್ಯ ಪವಿತ್ರ, ಮಕರಂದ, ಸುಬ್ರಹ್ಮಣ್ಯ ಹಾಗೂ ಶ್ರೀಮತಿ ರಸಿಕಾ ಘಡ್ಶೆ ಸುಶ್ರಾವ್ಯವಾಗಿ ಗಾಯನ ಮಾಡಿದರು.

ಆರಂಭದಲ್ಲಿ ಪ್ರಾಂಶುಪಾಲೆ ಉಮಾನಾಗ ಭೂಷಣ್ ಸ್ವಾಗತಿಸಿದರು. ಶ್ರೀಮತಿ ಸುಮಾದ್ವಾರಕಾನಾಥ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಗಾಯತ್ರಿ ರಾಮು ಅತಿಥಿಗಳನ್ನು ಪರಿಚಯಿಸಿದರು. ಕೊನೆಗೆ ಶ್ರೀ ಶಾರದ ಸ್ತುತಿಯನ್ನು ವಿವಿಧ ಭಾಷೆಗಳಲ್ಲಿ ಗಾಯನ ಮಾಡಿದರು.

ನವರಾತ್ರಿ ಪ್ರಯುಕ್ತ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಡೊಂಬಿವಲಿಯ ಕೂಚುಪುಡಿ ನೃತ್ಯ ಅಕಾಡೆಮಿಯ ವಿದ್ಯಾರ್ಥಿಗಳಿಂದ ಗುರು ಶ್ರೀಮತಿ ವಿಜಯಾ ಪ್ರಸಾದ್ ನಿರ್ದೇಶನದಲ್ಲಿ ನಡೆದ 'ನವದುರ್ಗಾ' ನೃತ್ಯ ರೂಪಕವು ರಸಿಕರೆಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

**ಕರ್ನಾಟಕ ಸಂಘದಲ್ಲಿ ಸಮವಸ್ತ್ರ ವಿತರಣೆ ಸಮಾರಂಭ**

ಮುಂಬಯಿ : ಪೂಜ್ಯ ತಂದೆಯವರ ನೆನಪಿಗಾಗಿ ಪ್ರತೀ ವರ್ಷ ಮುನ್ಸಿಪಾಲಿಟಿಯ ಕನ್ನಡ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡಬೇಕೆಂಬ ಈ ಯೋಜನೆಗೆ ಕರ್ನಾಟಕ ಸಂಘವು ಪೂರ್ಣ ಸಹಕಾರ ನೀಡಿದೆ. ಪದಾಧಿಕಾರಿಗಳಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ ಎಂದು ಪ್ರಖ್ಯಾತ ಉದ್ಯಮಿ, ಸಮಾಜ ಸೇವಕ ಮತ್ತು ಕರ್ನಾಟಕ ಸಂಘದ ಅಜೀವ ಸದಸ್ಯರಾದ ಯು.ವಿ. ರಾವ್‌ರವರು ಕರ್ನಾಟಕ ಸಂಘ ಮುಂಬಯಿಯ 'ವಿದ್ಯಾವಿಕಾಸ' ಸಮಿತಿಯ ವತಿಯಿಂದ ದಿನಾಂಕ -10-01ರಂದು ಆಯೋಜಿಸಿದ್ದ ಸಮವಸ್ತ್ರ ವಿತರಣೆ ಸಮಾರಂಭದ ಗೌರವ ಅತಿಥಿಯ ಸ್ಥಾನದಿಂದ ಮಾತಾಡುತ್ತಿದ್ದರು.

ಶ್ರೀಯುತರು ಮುಂದುವರಿಯುತ್ತಾ ಇಂತಹ ಸುಸಂದರ್ಭದಲ್ಲಿ ತಂದೆಯವರ ಕಿರುಪರಿಚಯವನ್ನು ನೀಡಲು ಬಯಸುತ್ತೇನೆ. ತಂದೆ ಶಿವರಾವ್‌ರವರು ಶಿಸ್ತಿನ ಶಿಕ್ಷಕರಾಗಿ, ಮುಖ್ಯೋಪಾಧ್ಯಯರಾಗಿ 35 ವರ್ಷ ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಬಡತನದಲ್ಲೂ ಪರೋಪಕಾರಕ್ಕೆ ಸದಾಮುಂದು. ಬಲಕೈ ನೀಡಿದ ದಾನ ಎಡಕೈಗೆ ತಿಳಿಯದಂತೆ ದಾನ ಮಾಡಿದವರು. ಶಾಲೆಗಳು ಸರಕಾರದ ಅನುದಾನ ಸಿಕ್ಕಿದರೂ ಮುಚ್ಚುವ ಪರಿಸ್ಥಿತಿ ಬಂದಾಗ ಸಾಲ ಎತ್ತಿ ಶಾಲೆಯನ್ನು ಸಮರ್ಥವಾಗಿ ನಡೆಸಿದರು. ಇಂದು ಪ್ರತಿಭಾವಂತ ಮಕ್ಕಳಿಗೆ ತಂದೆಯ ಹೆಸರಿನಲ್ಲಿ 'ವಿದ್ಯಾರ್ಥಿವೇತನ' ನೀಡುವಾಗ ಅಭಿಮಾನವಾಗುತ್ತದೆ. ಇದಕ್ಕೆ ಮಹಾನಗರ ಪಾಲಿಕೆಯ ಶಿಕ್ಷಣಾಧಿಕಾರಿಗಳೂ ಸಹಕಾರ ನೀಡಿದ್ದಾರೆ ಎಂದು ತಮ್ಮ ಭಾವನೆಯನ್ನು ವ್ಯಕ್ತಗೊಳಿಸಿದರು. ಮುಖ್ಯ ಅತಿಥಿಯ ಸ್ಥಾನದಿಂದ ಪ್ರಖ್ಯಾತ ಉದ್ಯಮಿ ಪ್ರಭಾಕರ್ ಬೇಕಲ್‌ರವರು ಮಾತಾಡುತ್ತಾ ''ಕರ್ನಾಟಕ ಸಂಘವು ಶೈಕ್ಷಣಿಕ ಕ್ಷೇತ್ರಕ್ಕೆ ಹಲವಾರು ವಿಧದಿಂದ ಪ್ರತಿವರ್ಷ ಸಹಾಯವನ್ನು ನೀಡುತ್ತಾ ಬಂದಿದೆ. ಇಂದಿನ ಮಕ್ಕಳೇ ಮುಂದಿನ ಪ್ರಜೆ. ಅವರಿಗೆ ಸಮವಸ್ತ್ರ ನೀಡಿ ನಾವು ಗೌರವಿಸುತ್ತಿದ್ದೇವೆ. ಸಂಘದಿಂದ ಇನ್ನೂ ಉತ್ತಮ ಸೇವೆಯು ಕನ್ನಡ ಬಾಂಧವರಿಗೆ, ಕನ್ನಡ ಭಾಷೆಗೆ ಶೈಕ್ಷಣಿಕ ಕ್ಷೇತ್ರಕ್ಕೆ ಲಭಿಸಲಿ ಎಂದು ಹಾರೈಸಿದರು.

ಸಂಘದ ಅಧ್ಯಕ್ಷ ರವಿ ರಾ. ಅಂಚನ್‌ರವರು ಎಲ್ಲರನ್ನೂ ಸ್ವಾಗತಿಸುತ್ತಾ ''ಶಿಕ್ಷಕರು, ಪಾಲಕರು ನಮ್ಮ ಈ ಕಾರ್ಯಕ್ರಮಕ್ಕೆ ಪೂರಕವಾಗಿ ಸ್ಪಂದಿಸಿದ್ದೀರಿ. ಸ್ವಾತಂತ್ರ್ಯ ಸಿಕ್ಕಿ 52 ವರ್ಷ ಕಳೆದರೂ ನಾವು ಸ್ವಾವಲಂಬಿಗಳಾಗಲಿಲ್ಲ. ಕಾರಣ ಶಿಕ್ಷಣದ ಅಭಾವ. ಪಾಲಕರು ಅವಿದ್ಯಾವಂತರಿರಬಹುದು, ಬಡವರಿರಬಹುದು ಆದರೂ ಮುಂದಿನ ಪೀಳಿಗೆಯು ಸ್ವಾಲಂಬಿಯಾಗಬೇಕೆಂಬ ಕಳಕಳಿಯಿದೆ. ಈ ವರ್ಷದಿಂದ ಕರ್ನಾಟಕ ಸಂಘವು ಹೊಸ ಪರಂಪರೆಯನ್ನು ಶುರು ಮಾಡಿದೆ. ವಿದ್ಯಾಕ್ಷೇತ್ರದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಶಿವರಾವ್ ಟ್ರಸ್ಟ್'ನಿಂದ ವಿದ್ಯಾರ್ಥಿವೇತನ ನೀಡುವುದು. ಯು.ವಿ. ರಾವ್‌ರವರು ತಮ್ಮ ತೀರ್ಥರೂಪರ ಸ್ಮೃತಿಗಾಗಿ ಈ ಯೋಜನೆ ಹಾಕಿರುವುದು ಅಭಿನಂದನೀಯ. ಕರ್ನಾಟಕ ಸಂಘದ ಶಿಕ್ಷಣ ನಿಧಿಗಾಗಿ ಹಲವಾರು ದಾನಿಗಳು ಸಹಾಯ ಮಾಡಿದ್ದಾರೆ. ಅವರೆಲ್ಲರನ್ನು ಸ್ಮರಿಸುತ್ತಾ ಮಹಾನಗರ ಪಾಲಿಕೆಯ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಿ ಗೌರವಿಸುತ್ತಿದ್ದೇವೆ. ವಿದ್ಯಾರ್ಥಿಗಳ ಭವಿಷ್ಯ ಸುಗಮವಾಗಲಿ, ಶೈಕ್ಷಣಿಕವಾಗಿ ಫಲಪ್ರದವಾಗಲಿ ಎಂದು ಹಾರೈಸಿದರು. ಶಿಕ್ಷಣಾಧಿಕಾರಿ ಶಾರದ ಶೆಟ್ಟಿಯವರು ಶಿಕ್ಷಕ, ಪಾಲಕರನ್ನುದ್ದೇಶಿಸುತ್ತಾ ''ಮುಂಬಯಿಯಲ್ಲಿರುವ ಸಂಘ ಸಂಸ್ಥೆಗಳು ಕನ್ನಡ ಶಾಲೆಗೆ, ಭಾಷೆಗೆ ಪ್ರಭಲವಾದ ಬೆಂಬಲ ನೀಡುತ್ತಿವೆ. ಕನ್ನಡ ಶಿಕ್ಷಣಕ್ಕೆ ಭದ್ರ ನೆಲೆಯನ್ನು ಪಡೆಯುವುದಕ್ಕಾಗಿ ಇವರ ಸಹಕಾರದ ಅವಶ್ಯಕತೆ ಇದೆ, ಇನ್ನು ಮುಂದೆಯೂ ಸಿಗುತ್ತಾ ಇರಲಿ ಎಂದು ಆಶಿಸಿದರು.

ಪ್ರತಿಭಾವಂತ ಮಕ್ಕಳಿಗೆ ಯು.ವಿ. ರಾವ್‌ರವರು ವಿದ್ಯಾರ್ಥಿ ವೇತನವನ್ನು ನೀಡಿದರು. ಸಮವಸ್ತ್ರ ವಿತರಣೆಯನ್ನು ಮುಖ್ಯ ಅತಿಥಿ ಪ್ರಭಾಕರ್ ಬೇಕಲ್ ಮತ್ತು ಯು.ವಿ. ರಾವ್‌ರವರ ಸಹೋದರ ಶ್ರೀಧರ್ ರಾವ್‌ರವರು ಮಾಡಿದರು. ಒಟ್ಟು 28 ಶಾಲೆಯ 663 ಮಕ್ಕಳಿಗೆ ಸಮವಸ್ತ್ರ ವಿತರಣೆ ಮತ್ತು 7 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಯ್ತು.

ಕಾರ್ಯಕ್ರಮದಲ್ಲಿ ಬಿ.ಎ. ಸನದಿ, ಡಾ. ಜಿ.ಡಿ. ಜೋಶಿ, ಎಂ.ಡಿ. ರಾವ್ ಮತ್ತು ಸುರೇಂದ್ರ ರಾವ್ ಕಾರ್ಕಳ್‌ರವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರ್ವಹಣೆಯನ್ನು ಭರತ್‌ಕುಮಾರ್ ಪೊಲಿಪು ನಿರ್ವಹಿಸಿ ಕೊನೆಗೆ ವಂದನಾರ್ಪಣೆ ಗೈದರು.

## ಅಭಿನಂದನೆ

ಮೈಸೂರು ಅಸೋಸಿಯೇಷನ್ನಿನ ಹಿರಿಯ ಹಾಗೂ ಅಜೀವ ಸದಸ್ಯರಾದ ಖ್ಯಾತ ಚಲನಚಿತ್ರ ನಿರ್ಮಾಪಕ, ನಿರ್ದೇಶಕರಾದ ಶ್ರೀ ಬಿ.ಎಸ್. ರಂಗಾ ಅವರಿಗೆ ಅವರು ಚಲನಚಿತ್ರದ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ ಈ ವರ್ಷದ ಕರ್ನಾಟಕ ರಾಜ್ಯೋತ್ಸವದ ಪ್ರಶಸ್ತಿಯನ್ನು ಕೊಟ್ಟು ಗೌರವಿಸಲಾಗಿದೆ ಎಂದು ತಿಳಿಸಲು ನೇಸರು ಸಂತೋಷ ಪಡುತ್ತದೆ. ಶ್ರೀರಂಗಾ ಅವರಿಗೆ 'ನೇಸರು'ವಿನ ಅಭಿನಂದನೆಗಳು.

## BHARATANATYAM ARANGETRAM

**(Ranga Pravesha)**

of

**Kum. Anushree Harinarayana**

**(Disciple of Smt. Thangamani Nagarajan)**

on Sunday December 16, 2001
at 1 p.m. (13 Hrs)

at

Vishnudas Bhave Natyagriha,
Vashi.
(Opp. Vashi Bus Stand
Navi Mumbai)

*All are cordially invited.*

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38